


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 30 Friday 04-10-2024 E-mail : maruti.b.hosamani76@gmail.com Page: 4 Price : Rs. 1/-


## "ಸುಮಾ ದಿ ಫ್ಲವರ್" ಮೈಸೂರು ದಸರಾ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನ



**ಸಿಹಿ ಕಹಿ ಸುದ್ದಿ,**
**ಬೆಂಗಳೂರು** : ಓಂ ಸಾಯಿ ಸಿನಿಮಾಸ್' ಬ್ಯಾನರಿನಲ್ಲಿ ನಿರ್ಮಾಣ ವಾಗಿರುವ ಮಹಿಳಾ ಪ್ರಧಾನ ಕಥಾ ಹಂದರ ಹೊಂದಿರುವ 'ಸುಮಾ ದಿ ಫ್ಲವರ್' ವಿಶ್ವ ವಿಖ್ಯಾತ ಮೈಸೂರು ದಸರಾ ಚಲನ ಚಿತ್ರೋತ್ಸವಕ್ಕೆ ಅಧಿಕೃತವಾಗಿ ಆಯ್ಕೆಯಾಗಿದೆ.
ಈ ಹಿಂದೆ ಕನ್ನಡದಲ್ಲಿ 'ಶ್ರೀ ಕಬ್ಬಾಳಮ್ಮನ ಮಹಿಮೆ', 'ಮನೆ' 'ಬ್ಯಾಂಕ್ ಲೋನ್' 'ಸುಳಿ' ಸೇರಿದಂತೆ ನಾಲ್ಕು ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿ ಕೊಂಡಿರುವ ರಶ್ಮಿ ಎಸ್. 'ಸುಮಾ ದಿ ಫ್ಲವರ್' ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಮೊದಲನೆ ಬಾರಿಗೆ ಮಾನ್ಯತಾ ನಾಯ್ಡು ನಾಯಕಿಯಾಗಿ ಕಾಣಿಸಿ ಕೊಂಡಿದ್ದು, ಮೈಸೂರು ಮೂಲದ ಪ್ರದೀಪ್ ಗೌಡ ನಾಯಕನಾಗಿ, ಉಳಿದಂತೆ ಜೋ ಸೈಮನ್, ಬಲರಾಜ್ ವಾಡಿ, ವಿಜಯಲಕ್ಷ್ಮೀ ಉಪಾಧ್ಯಾಯ,
ಮುರಳೀಧರ್ ಡಿ. ಆರ್, ಕಾವ್ಯ ಪ್ರಕಾಶ್, ಪವಿತ್ರ, ಅವಿನಾಶ ಗಂಜಿಹಾಳ, ಶಿವಕುಮಾರ್ ಆರಾಧ್ಯ , ಹರಿಹರನ್ ಬಿ. ಪಿ,ಸಿದ್ದು ಮಂಡ್ಯ, ವೀರೇಂದ್ರ ಬೆಳ್ಳಿಚುಕ್ಕಿ, ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ ಧಾರಾವಾಹಿ ಖ್ಯಾತಿಯ ಭೈರವಿ,ಮಂಜುಳಾ ವಿಶೇಷ ಅತಿಥಿ ಪಾತ್ರದಲ್ಲಿ ಡಾ, ವಿ.ನಾಗೇಂದ್ರ ಪ್ರಸಾದ್ , ವೈದ್ಯೆಯಾದ ಡಾ, ಶ್ವೇತ (ಗೈನಾಕಲಜಿಸ್ಟ್) ಅಭಿನಯಿಸಿದ್ದಾರೆ.
15 ದಿನಗಳ ಕಾಲ ಒಂದೇ ಹಂತದಲ್ಲಿ ಚಿತ್ರೀಕರಣವನ್ನು ಮಂಡ್ಯ, ಮದ್ದೂರು,ಆಲಭುಜನಹಳ್ಳಿ, ಕೆ.ಎಂ. ದೊಡ್ಡಿ, ನಗರಕೆರೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. 'ಸುಮಾ ದಿ ಫ್ಲವರ್' ' ಸಿನಿಮಾಕ್ಕೆ ದೇವೂ, ಮತ್ತು ಗಗನ್ ಆರ್ ಛಾಯಾಗ್ರಹಣ, ಮುತ್ತುರಾಜ್ ಟಿ. ಸಂಕಲನವಿದೆ. ಹಾಡುಗಳಿಗೆ ವೇದಾಂತ್ ಅತಿಶಯ್ ಜೈನ್ ಸಂಗೀತವಿದ್ದು, ಸತೀಶ್ ಜೋಶಿ ಹಾವೇರಿ ಮತ್ತು ಪ್ರದೀಪ್ ಗೌಡ ಅವರ ಸಾಹಿತ್ಯವಿದೆ. ವೇದಾಂತ್ ಜೈನ್, ಯೋಗಶ್ರೀ ಹಾಡುಗಳಿಗೆ ಧ್ವನಿ ನೀಡಿದ್ದು, ಪತ್ರಿಕಾ ಸಂಪರ್ಕ ಕಾರ್ತಿಕ್ ಸುಧನ್, ಡಾ, ಪ್ರಭು ಗಂಜಿಹಾಳ,ಡಾ, ವೀರೇಶ ಹಂಡಿಗಿ ಅವರದಿದೆ. ಸಿನಿಮಾಕ್ಕೆ ರಂಗಸ್ವಾಮಿ ಟಿ (ರವಿ) ಸಹ ನಿರ್ಮಾಪಕರಾಗಿದ್ದಾರೆ. ಈಗಷ್ಟೇ ಸಿಂಗಾಪೂರ ಲಾಯನ್ ಇಂಟರ್ ನ್ಯಾಷನ್ ಫಿಲ್ಮ್ ಫೆಸ್ಟಿವಲ್ನಲ್ಲಿ ಏಳು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದು, ಇದರ ಜೊತೆಗೆ ಈಗ ಮೈಸೂರು ದಸರಾ ಚಲನ ಚಿತ್ರೋತ್ಸವದಲ್ಲಿ ಇದೆ ಅಕ್ಟೋಬರ್ 10 ರಂದು ಮೈಸೂರಿನ ಡಿ.ಆರ್.ಸಿ ಯಲ್ಲಿ ಮುಂ.10 ಕ್ಕೆ ಪ್ರದರ್ಶನ ಗೊಳ್ಳುತ್ತಿದ್ದು ಚಿತ್ರ ತಂಡಕ್ಕೆ ಖುಷಿ ತಂದಿದೆ ಎಂದು ನಿರ್ದೇಶಕಿ ರಶ್ಮಿ.ಎಸ್ ಹೇಳಿದ್ದಾರೆ.

–ವರದಿ
**ಡಾ.ಪ್ರಭು ಗಂಜಿಹಾಳ**
**ಮೊ:9448775346**

## ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಸರ್ಕಾರ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು ತಿಳಿಸಿದ ಡಾ. ಎನ್.ಟಿ. ಶ್ರೀ ನಿವಾಸ್ ಶಾಸಕರು



**ಸಿಹಿ ಕಹಿ ಸುದ್ದಿ,**
**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಮಹಾತ್ಮ ಗಾಂಧೀಜಿ ಚಿತಾಭಸ್ಮದ ಆವರಣದಲ್ಲಿ ಆಯೋಜನೆ ಮಾಡಲಾಗಿದ್ದ ಗಾಂಧೀಜಿ ಜಯಂತಿ ದಿನದಂದು ಗಾಂಧೀಜಿ ಚಿತಾಭಸ್ಮಕ್ಕೆ ಗೌರವ ಪೂರಕ ಪುಷ್ಪ ನಮನ ಸಲ್ಲಿಸಿ ಈ ಸಂದರ್ಭದಲ್ಲಿ ಕೂಡ್ಲಿಗಿಯ ತಾಲೂಕಿನ ಪ್ರಮುಖ ಗ್ರಾಮೀಣ ಭಾಗದ ರೈತರು ಹೆಚ್ಚಿನ ಪ್ರಮಾಣದಲ್ಲಿ ಮಳೆಯನ್ನೇ ಅವಲಂಬಿಸಿ ನಂಬಿ ಬಿತ್ತನೆ ಮಾಡಿ ಬದುಕುವುದರಿಂದ ಡಾ, ಶ್ರೀನಿವಾಸ್. ಎನ್.ಟಿ ಅವರು ನಿರಂತರ ಶತಯಗ–'ತಾಯ ಪ್ರಯತ್ನದಿಂದ ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಡಿಯಲ್ಲಿ ಬರುವ ಕೂಡ್ಲಿಗಿ ಪಟ್ಟಣದ ಪಕ್ಕದಲ್ಲಿ ಬರುವ ಗುಂಡಿನ ಹೊಳೆ ಪ್ರದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅವಕಾಶ ಸಿಕ್ಕಿದೆ. ಕೂಡ್ಲಿಗಿ ತಾಲೂಕು ಮಟ್ಟದಲ್ಲಿ ಇಂತಹ ಮಹತ್ವದ ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅವಕಾಶಕ್ಕಾಗಿ ಶ್ರಮಿಸಿ ಸಹಕಾರ ನೀಡಿ ಪ್ರೋತ್ಸಾಹಿಸಿದ ಕರ್ನಾಟಕ ಸರ್ಕಾರದ ಸನ್ಮಾನ್ಯ ಶ್ರೀ ಸಿ.ಎಂ. ಸಿದ್ದರಾಮಯ್ಯನವರು, ಸನ್ಮಾನ ಡಿ.ಸಿ.ಎಂ ಡಿ.ಕೆ ಶಿವಕುಮಾರ್ ಅವರು, ಮಾನ್ಯ ಕೃಷಿ ಸಚಿವರಾದ ಚಲುವರಾಯ ಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆ.ಡ್. ಜಮೀರ್ ಅಹಮ್ಮದ್ ಖಾನ್, ಕಾರ್ಮಿಕ ಸಚಿವರಾದ ಸಂತೋಷ್ ಲಾಡ್, ಅಖಂಡ ಬಳ್ಳಾರಿ ಜಿಲ್ಲೆಯ ಸಂಸದರಾದ ಈ. ತುಕಾರಾಮ್, ಕೆ.ಎಂ. ಎಫ್. ಅಧ್ಯಕ್ಷಾದ ಭೀಮನಾಯಕ್, ಕೃಷಿ ಇಲಾಖೆ ಕಾರ್ಯದರ್ಶಿಗಳಾದ ಅನುಬ್ ಕುಮಾರ್, ಆಯುಕ್ತರಾದ ವೈ. ಎಸ್. ಪಾಟೀಲ್, ವಿಜಯನಗರ ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ್, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್ ಇವರುಗಳಿಗೆ ನಮ್ಮ ಕೂಡ್ಲಿಗಿ ಸಮಸ್ತ ಜನತೆಯ ಪರವಾಗಿ ಇಂದು ರಾಷ್ಟ್ರಪಿತ ಗಾಂಧಿ ಚಿತಾಭಸ್ಮದಲ್ಲಿ ನೆರವೇರಿದ ಗಾಂಧಿ ಜಯಂತಿಯ ಕಾರ್ಯಕ್ರಮದ ಸಂದರ್ಭದಲ್ಲಿ ಶಾಸಕರಾದ ಡಾ, ಶ್ರೀನಿವಾಸ್.ಎನ್.ಟಿ ಅವರು ಸಮಸ್ತರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಪ್ರಮುಖ ಮುಖಂಡರುಗಳಾದ ಗುರುತಿನಗೌಡ್ರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಕಾವಲಿ ಶಿವಪ್ಪ ನಾಯಕ ಪಟ್ಟಣ ಪಂಚಾಯಿತಿ ಅಧ್ಯಕ್ಷರು ಸಿ ಉಮೇಶ್ ಕಾಂಗ್ರೆಸ್ ಮುಖಂಡರು, ಇನ್ನೂ ಅನೇಕ ಪ್ರಮುಖ ಮುಖಂಡರುಗಳು ಭಾಗವಹಿಸಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ. ಬಿ.ಸಾಲುಮನೆ.ವಿಜಯನಗರ**

## ರಾಜ್ಯ ಸರ್ಕಾರ ನಡುಗಿಸಿದ ಒಳ ಮೀಸಲಾತಿ ಹೋರಾಟಗಾರರು

**ಸಿಹಿ ಕಹಿ ಸುದ್ದಿ,**
**ಮಾನ್ವಿ** : ಸುಪ್ರೀಂಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಆದೇಶವನ್ನು ಜಾರಿ ಮಾಡುವಂತೆ ಆಗ್ರಹಿಸಿ ಹೋರಾಟಗಾರರ ಕರೆಗೆ ಮಾನ್ವಿ ಬಂದ್ ಸಂಪೂರ್ಣ ಯಶಸ್ವಿ ಯಾಯಿತು.
ರಾಯಚೂರು ಜಿಲ್ಲೆ ಬಂದ್ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿದ್ದರಿಂದ ಒಂದು ರೀತಿಯಲ್ಲಿ ಸರಕಾರ–ಕ್ಕೆ ಚಾಟಿ ಬೀಸುವ ಕೆಲಸ ಮಾಡಿರುವುದು ಕಂಡು ಬಂತು. ಒಳ ಮೀಸಲಾತಿ ಹೋರಾಟಗಾರರ ಸೈನ್ಯವನ್ನು ಕಂಡು ಮಾನ್ವಿಯಲ್ಲಿ ಒಂದು ರೀತಿಯಲ್ಲಿ ಕ್ರಾಂತಿ ಯಾಯಿತು, ಒಳ ಮೀಸಲಾತಿಯನ್ನು ಜಾರಿ ಮಾಡಿ ಇಲ್ಲವೆ ನಮ್ಮ ಶಕ್ತಿಯನ್ನು ನೋಡಿ ಎಂದು ಕಿಡಿಕಾರಿದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿ–ಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಹುಸೇನ್.ಭಾಷಾ.ನಕ್ಕುಂದಿ.**
**ಮಾನ್ವಿ**




## ವಿದ್ಯಾರ್ಥಿಗಳು ಸಮಾಜ ಸೇವಾಗುಣಧರ್ಮವನ್ನು ಬೆಳೆಸಿಕೊಳ್ಳಬೇಕು: ಡಾ. ಜಗನ್ನಾಥ ವಿ. ಚವ್ಹಾಣ




**ಬಾಗಲಕೋಟೆ** : ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ ಮತ್ತು ಸಮಾಜ ಸೇವಾ ಗುಣ ಧರ್ಮಗಳನ್ನು ಬೆಳೆಸಿಕೊಳ್ಳುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆಂದು ಪ್ರಚಾರ್ಯ ಡಾ. ಜಗನ್ನಾಥ ವಿ. ಚವ್ಹಾಣ ಹೇಳಿದರು.
ಅವರು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಸೇವಾ ಯೋಜನೆ ಘಟಕಗಳ ಅಡಿಯಲ್ಲಿ ಎನ್.ಎಸ್. ಎಸ್. ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು,
ರಾಷ್ಟ್ರೀಯ ಸೇವಾ ಯೋಜನೆ ಪ್ರಸ್ತುತ ಸಂದರ್ಭದಲ್ಲಿ ಸದೃಢ ರಾಷ್ಟ್ರವನ್ನು ನಿರ್ಮಿಸಲು, ಯುವ ಜನಾಂಗದಲ್ಲಿ ದೇಶಾಭಿಮಾನ ಮತ್ತು ಸಮಾಜ ಸೇವಾ ಗುಣಧರ್ಮ ತುಂಬುವಲ್ಲಿ ಸಹಕಾರಿಯಾಗಿದೆ, ಅತಿ ಅವಶ್ಯಕ ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು 1969 ರ ಸಪ್ಟೆಂಬರ್ 24 ರಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 100 ವರ್ಷಗಳ ಜನ್ಮದಿನದ ಸವಿ ನೆನಪಿನ ಸಂದರ್ಭದಲ್ಲಿ ಎನ್.ಎಸ್.ಎಸ್. ಸಂಘಟನೆಯನ್ನು ಭಾರತ ಸರ್ಕಾರ ಜಾರಿಗೆ ತಂದಿತು ಎಂದರು.
ಕಾರ್ಯಕ್ರಮದಲ್ಲಿ ಐ.ಕ್ಯೂ. ಎ.ಸಿ. ಸಂಯೋಜಕಿ ಶ್ರೀಮತಿ ಗಿರಿಜಾ ನಾವದಗಿ, ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಎಂ. ಎಂ. ಹುದ್ದಾರ, ಮತ್ತು ಪ್ರಾಧ್ಯಾಪಕರಾದ ಶ್ರೀ ರಾಜು ಮೇಲಿನಮಣಿ, ಡಾ. ಐ. ಕೆ. ಮಠದ, ಶ್ರೀಮತಿ ಅಮೃತ ಗದ್ದನಕೇರಿ ಹಾಗೂ ಎನ್. ಎಸ್. ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.

## ಏನೇ ಕೊಟ್ಟರೂ ಸ್ಟುಡೆಂಟ್ ಲೈಫ್ ಮರಳಿ ಸಿಗುವದಿಲ್ಲ: ಶಾಸಕ ಜೆ.ಟಿ. ಪಾಟೀಲ



**ಬೀಳಗಿ** : ಸ್ಟುಡೆಂಟ್ ಲೈಫ್ ಗೋಲ್ಡನ್ ಲೈಪಾಗಿದ್ದು, ಏನೇ ಕೊಟ್ಟರೂ ಸ್ಟುಡೆಂಟ್ ಲೈಪ್ ಮರಳಿ ಸಿಗುವದಿಲ್ಲ. ಪಾಲಕರು ಮಕ್ಕಳ ಮೇಲೆ ಭರವಸೆ ಇಟ್ಟು ಕಾಲೇಜಿಗೆ ಕಳಿಸಿರುತ್ತಾರೆ. ಬೇಕಾಬಿಟ್ಟಿಯಾಗಿ ಕಲಿಯಬಾರದು ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ, ಶಾಸಕ ಜೆ. ಟಿ. ಪಾಟೀಲ ಹೇಳಿದರು.
ಪಟ್ಟಣದ ಶ್ರೀಮತಿ ಸುಶೀಲಾತಾಯಿ ರುದ್ರಪ್ಪ ನಿರಾಣಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅಂದಾಜು 50 ಲಕ್ಷ ರೂ. ವೆಚ್ಚದಲ್ಲಿ ಸಭಾಭವನ (ಸೆಮಿನಾರ್ ಹಾಲ್) ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಶಿಕ್ಷಣಕ್ಕೆ ಬಹಳ ಮಹತ್ವವಿದೆ ಎಂದರು.
ಜಗತ್ತಿನ ಆಗುಹೋಗುಗಳನ್ನು ಮುಷ್ಠಿಯಲ್ಲಿ ನೋಡಬಹುದು, ಕೇಳಬಹುದು. ಬೇರೆ ಬೇರೆ ದೇಶದ ಕಲಿಸುವಿಕೆಯನ್ನು ಇಲ್ಲಿಯೇ ಕುಳಿತುಕೊಂಡು ತಿಳಿಯುವಂತಹ ಟೆಕ್ನಾಲಜಿ ಮುಂದುವರೆದಿದೆ. ಇಲ್ಲಿ ಯಾರೂ ಪರಿಪಕ್ವವಲ್ಲ. ಎಲ್ಲರೂ ಜೀವನ ಪರ್ಯಂತರವಾಗಿ ಅಂದರೆ ಸಾಯುವರೆಗೆ ಕಲಿಯುವದಿದೆ. ಆದ್ದರಿಂದ ಎಲ್ಲರೂ ಒಳ್ಳೆಯ ಅಭ್ಯಾಸ ಮಾಡಿ ಕಾಲೇಜಿಗೆ, ಪಾಲಕರಿಗೆ, ತಾಲೂಕಿಗೆ ಒಳ್ಳೆಯ ಹೆಸರು ತರಬೇಕು ಎಂದರು.
ಇಂದು ಮಹಿಳೆಯರು ಎಲ್ಲ ರಂಗಗಳಲ್ಲಿ ಪುರುಷರಿಗಿಂತ ಮುಂದಿರುವರು. ಮನುಷ್ಯ ಎಷ್ಟೇ ಮುಂದುವರೆದರೂ ಸಮಸ್ಯೆಗಳು ಸಹಿತ ಉತ್ಪಾದನೆಯಾಗುತ್ತಿವೆ. ನಮ್ಮ ದೇಶ ಜನಪ್ರತಿನಿಧಿಗಳ ಮೇಲೆ ಅವಲಂಭಿತವಾಗಿದೆ. ಹಿರಿಯರು, ರಾಜಕಾರಣಿಗಳು, ವಿದ್ಯಾರ್ಥಿಗಳಲ್ಲಿ ಶಿಸ್ತು ಇಲ್ಲ. ಮನುಷ್ಯನಲ್ಲಿ ಶಿಸ್ತು, ಸಮಯ ಪ್ರಜ್ಞೆ, ಸ್ವಚ್ಛತೆ, ಸಂಸ್ಕಾರ, ಗುರುಗಳ ಬಗ್ಗೆ ಗೌರವ ಇರಬೇಕು. ಅಂದಾಗ ಏನಾದರೂ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದು ಹೇಳಿದರು.
ನಮ್ಮ ದೇಶದಲ್ಲಿ ಸ್ವಚ್ಛತೆ ಕಾಪಾಡುವವರೆಗೆ ಸಮಸ್ಯೆಯನ್ನು ಬಗೆಹರಿಸಲು ಕಷ್ಟವಿದೆ. ಎಲ್ಲವನ್ನು ಸರ್ಕಾರ ಮಾಡಲು ಸಾಧ್ಯವಿಲ್ಲ. ಜಗತ್ತಿನಲ್ಲಿ ನಮ್ಮದೇಶ ಜನಸಂಖ್ಯೆಯಲ್ಲಿ ನಂಬರ್ 1 ಸ್ಥಾನಕ್ಕೆ ಬಂದಿದೆ. ನಮ್ಮ ದೇಶವನ್ನಾಳಿದ ಸರ್ಕಾರಗಳು ಜನರಿಗೆ ಶಿಸ್ತು, ಸಮಯಪಾಲನೆ, ಸ್ವಚ್ಛತೆ, ಸಮಯಪ್ರಜ್ಞೆ, ಕಾನೂನು ಪಾಲನೆ ಕಲಿಸಲಿಲ್ಲ ಎಂದು ವಿಷಾಧಿಸಿದರು.
ಕಾಲೇಜು ಸಿಬ್ಬಂದಿ ಕಾಮಗಾರಿ ಕಡೆಗೆ ಗಮನವಹಿಸುತ್ತಿರಬೇಕು. ಒಳ್ಳೆಯ ಗುಣಮಟ್ಟದ ಕಾಮಗಾರಿ ತೆಗೆದುಕೊಳ್ಳಬೇಕು. ಕಳಪೆ ಅನಿಸಿದರೆ ಕೆಲಸ ನಿಲ್ಲಿಸುವಂತೆ ಉಪನ್ಯಾಸಕರು, ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿ, ಗುತ್ತಿಗೆದಾರರು ಯೋಜನೆ ವರದಿ ಪ್ರಕಾರ ಕಾಮಗಾರಿ ನಡೆಸದಿದ್ದರೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.
ಹಿರಿಯಶ್ರೇಣಿ ಉಪನ್ಯಾಸಕ ಎಸ್. ಪಿ. ಕೋಳಿವಾಡ,ವಿಭಾಗದಮುಖ್ಯಸ್ಥ ಆರ್.ಎ. ನದಾಫ,ಕ್ರೀಡಾಸಲಹೆಗಾರಸೋಮಶೇಖರ ಸಜ್ಜನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನಮಂತ ಕಾಖಂಡಕಿ, ಪಪಂ ಸದಸ್ಯ ಪಡಿಯಪ್ಪ ಕರಿಗಾರ, ತಾಪಂ ಮಾಜಿ ಅಧ್ಯಕ್ಷ ಶ್ರೀಶೈಲ ಸೂಳಿಕೇರಿ, ಜಿಪಂ ಮಾಜಿ ಅಧ್ಯಕ್ಷ ವೈ. ಸಿ. ರೊಳ್ಳಿ, ಮುಂಜುನಾಥ ಪಲ್ಲೇದ, ಪ್ರವೀಣ ಚಿಕ್ಕೂರ, ಹಾಸಿಂಪೀರ ಮುಜಾವರ, ಸಿದ್ದು ಸಾರಾವರಿ,ಪ್ರಕಾಶ ಚಿನಿವಾಲರ,ಸಂತೋಷ ಕೋಲ್ಹಾರ ಮತ್ತಿತರಿದ್ದರು.

## ಪೌರಕಾರ್ಮಿಕರು ನಿತ್ಯ ಕಾಯಕಯೋಗಿ, ಭಾಂಡಗೆ



**ಬಾಗಲಕೋಟೆ** : ಪೌರಕಾರ್ಮಿಕರ ದಿನಾಚರಣೆ ಪ್ರಯುಕ್ತ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರು ತಮ್ಮ ನಿವಾಸದಲ್ಲಿ ಪೌರಕಾರ್ಮಿಕರ ಜೊತೆ ಬೆರೆತು ಅವರ ಕಷ್ಟ ಸುಖಗಳನ್ನು ಆಲಿಸಿ, ಆತಿಥ್ಯ ನೀಡಿ ಅವರ ಜೊತೆ ಸೇರಿ ಉಪಹಾರ ಸೇವಿಸಿದರು.
ನಗರದ ಲಕ್ಷ್ಮೀ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಪೌರಕಾರ್ಮಿಕರಿಗೆ ವಿಶೇಷ ಉಪಹಾರ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಮಾತನಾಡಿದ ನಾರಾಯಣಸಾ ಭಾಂಡಗೆ ಅವರು ಪೌರಕಾರ್ಮಿಕರು ದಿನ ನಿತ್ಯ ನಗರದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ಪರಿಣಾಮ ನಾವೆಲ್ಲರೂ ಸಾಂಕ್ರಾಮಿಕ ರೋಗಗಳಿಂದ ಸುರಕ್ಷಿತವಾಗಿದ್ದೇವೆ. ಇವರ ದಿನನಿತ್ಯದ ಕಾಯಕದಿಂದ ನಗರದ ಸೌಂದರ್ಯ ಹೆಚ್ಚುತ್ತಿದೆ ಎಂದು ಹೇಳಿದರು.
30 ಕ್ಕೂ ಅಧಿಕ ಪೌರಕಾರ್ಮಿಕರನ್ನು ಇದೇ ವೇಳೆ ಗೌರವಿಸಿ ಸನ್ಮಾನಿಸಲಾಯಿತು.

## ಷರತ್ತುಗಳ ಸರಳೀಕರಣ: ರನ್ನ ಸಕ್ಕರೆ ಕಾರ್ಖಾನೆ ಆರಂಭಕ್ಕೊಂದು ಹೊಸ ಭರವಸೆ: ರೈತ ಸಮೂಹದಲ್ಲಿ ಭರವಸೆಯ ಹೊಸ ಬೆಳಕು

**ಬಾಗಲಕೋಟೆ** : ಮುಚ್ಚಲ್ಪಟ್ಟಿರುವ ಜಿಲ್ಲೆ0ಯ ಸಹಕಾರಿ ಕ್ಷೇತ್ರದ ರೈತರ ರನ್ನ ಸಹಕಾರಿ ಕಾರ್ಖಾನೆ ಆರಂಭಿಸಲು ಸರ್ಕಾರ ಮನಸ್ಸು ಮಾಡಿರುವುದು, ರೈತ ಸಮೂಹದಲ್ಲಿ ಭರವಸೆ0ಯ ಹೊಸ ಬೆಳಕು ಮೂಡಿಸಿದೆ.
ತೀವ್ರ ಆರ್ಥಿಕ ಸಂಕಷ್ಟದಿಂದ ಮುಚ್ಚಿ ಹೋಗಿರುವ ರನ್ನ ಸಕ್ಕರೆ ಕಾರ್ಖಾನೆ0ಯನ್ನು ಪುನಾರಂಭಿಸುವಂತೆ ರೈತರು ಸಾಕಷ್ಟು ಉಗ್ರ ಹೋರಾಟ ನಡೆಸಿದ ಪರಿಣಾಮ ಸರ್ಕಾರ ಕಾರ್ಖಾನೆ0ಯನ್ನು ಖಾಸಗಿ0ಯವರಿಗೆ ಲೀಜ್ ಮೇಲೆ ಆರಂಭಿಸಲು ಹತ್ತು ಹಲವು ಷರತ್ತುಗಳನ್ನು ವಿಧಿಸಿ ಟೆಂಡರ್ ಕರೆದಿತ್ತು.
ಆದರೆ ಕಠಿಣ ಷರತ್ತುಗಳ ಹಿನ್ನೆಲೆ0ಯಲ್ಲಿ ಟೆಂಡರ್ ಪ್ರಕ್ರಿ0ಯೆಗೆ 0ಯಾರೂ ಮುಂದಾಗಲೇ ಇಲ್ಲ. ಪರಿಣಾಮವಾಗಿ ಕಳೆದ ಮೂರು ವರ್ಷಗಳಿಂದ ಕಾರ್ಖಾನೆ ಕಬ್ಬು ಅರೆ0ಯುವುದನ್ನು ನಿಲ್ಲಿಸಿದೆ.
ಸರ್ಕಾರ ಕಾರ್ಖಾನೆ0ಯನ್ನು ಖಾಸಗಿ0ಯವರಿಗೆ ವಹಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲು ಮುಂದಾದರೂ ಷರತ್ತುಗಳು ಅಡ್ಡಿ0ಯಾದವು. ಇದರಿಂದ ರೈತರ ಹೋರಾಟ ಹಾಗೆ ಮುಂದುವರಿಯಿತು.
ಇದೀಗ ಸರ್ಕಾರ ರೈತರ ಹೋರಾಟಕ್ಕೆ ಮಣಿದು ಷರತ್ತುಗಳನ್ನು ಸಡಿಲಿಸಿ, ಮತ್ತೆ ಕಾರ್ಖಾನೆ0ಯನ್ನು ಖಾಸಗಿ0ಯವರಿಗೆ 30 ವರ್ಷಗಳ ಅವಧಿಗೆ ಲೀಸ್ ಮೇಲೆ ನೀಡಲು ಮುಂದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲರ ಈ ಪ್ರ0ಯತ್ನ ಅಭಿನಂದನಾರ್ಹ.



ಕಾರ್ಖಾನೆ0ಯನ್ನು ಖಾಸಗಿ0ಯವರಿಗೆ ವಹಿಸಲು ಷರತ್ತುಗಳನ್ನು ಸಡಿಲಿಸಿರುವ ಸರ್ಕಾರ, ಕೂಡಲೇ ಟೆಂಡರ್ ಪ್ರಕ್ರಿ0ಯೆಗೆ ಮುಂದಾಗಬೇಕಿದೆ. ಈಗಾಗಲೇ ಸತತ ಮೂರು ವರ್ಷ ಬಂದಾಗಿರುವ ಕಾರ್ಖಾನೆ ಪ್ರಸಕ್ತ ಹಂಗಾಮಿನಲ್ಲಿ ಆರಂಭಗೊಳ್ಳುವಂತಾಗಲು ಶತ ಪ್ರ0ಯತ್ನ ಆಗಬೇಕಿದೆ.
ಶೀಘ್ರ ಟೆಂಡರ್ ಪ್ರಕ್ರಿ0ಯೆ ಆರಂಭಗೊಂಡಲ್ಲಿ ಮಾತ್ರ ಕಬ್ಬು ನುರಿಸುವ ಹಂಗಾಮು ಆರಂಭಗೊಳ್ಳುವ ಹೊತ್ತಿಗೆ ಟೆಂಡರ್ ನಲ್ಲಿ ಲೀಸ್ ಪಡೆದವರು ಕಾರ್ಖಾನೆ0ಯನ್ನು ಕಬ್ಬು ನುರಿಸುವ ಪ್ರಕ್ರಿ0ಯೆ ಆರಂಭಕ್ಕೆ ಸಜ್ಜುಗೊಳಿಸಲು ಸಾಧ್ಯವಾಗಲಿದೆ.
ವಿಳಂಭವಾದಲ್ಲಿ ಈ ಬಾರಿ0ಯೂ ಕಾರ್ಖಾನೆ ಆರಂಭಗೊಳ್ಳಬಹುದು ಎನ್ನುವ ನಿರೀಕ್ಷೆ ಹುಸಿ0ಯಾಗಲಿದೆ. ಹಾಗಾಗದಂತೆ ಉಭ0ಯ ಸಚಿವರು ಸೇರಿ ಟೆಂಡರ್ ಪ್ರಕ್ರಿ0ಯೆ ಚುರುಕುಗೊಳಿಸಲು ಮನಸ್ಸು ಮಾಡಬೇಕು. ಆ ಮೂಲಕ ರೈತರು ಹಾಗೂ ಕಬ್ಬು ಬೆಳೆಗಾರರ ಹಿತ ಕಾಪಾಡುವ ಕೆಲಸ ಆಗುವ ಜತೆಗೆ ಬಂದಾಗಿರುವ ಜಿಲ್ಲೆ0ಯ ಸಹಕಾರಿ ರಂಗದ ರೈತರ ರನ್ನ ಸಹಕಾರಿ ಸಕ್ಕರೆ ಕಾರ್ಖಾನೆ ಆರಂಭಕ್ಕೆ ಚಾಲನೆ ನೀಡಬೇಕಿದೆ.
ರೈತರು ಅಂದುಕೊಂಡಂತೆ ಪ್ರಸಕ್ತ ಹಂಗಾಮಿನಲ್ಲಿ ಕಾರ್ಖಾನೆ ಆರಂಭಗೊಂಡಲ್ಲಿ ಅದರ ಶ್ರೇ0ಯಸ್ಸು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲರಿಗೆ ಸಲ್ಲಲಿದೆ. ಜತೆಗೆ ಉಭ0ಯತರು ರೈತರಿಗೆ ನೀಡಿದ ಭರವಸೆ0ಯನ್ನು ಈಡೇರಿಸಿದಂತಾಗಲಿದೆ.

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಸ್ಥೆಯಿಂದ ಪಟೇಲ್‌ಗೆ ಸನ್ಮಾನ



**ಕೊಪ್ಪಳ :** ತಾಲೂಕಿನ ಕಿನ್ನಾಳ ಗ್ರಾಮ ದಲ್ಲಿ ಶನಿವಾರ ಸಂಜೆ ಕೊಪ್ಪಳ ನಗರಸಭೆಯ ನೂತನ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರಿಗೆ ಗ್ರಾಮದ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಗ್ರಾಮೀಣ ಸೇವಾ ಸಂಸ್ಥೆ ವತಿಯಿಂದ ಶ್ರೀ ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಸನ್ಮಾನಿಸಲಾಯಿತು,

ಸನ್ಮಾನ ಸ್ವೀಕರಿಸಿ ಮಾತನಾಡಿದ ಅಮ್ಜದ್ ಪಟೇಲ್ ರವರು ಸನ್ಮಾನದಿಂದ ಜವಾಬ್ದಾರಿ ಹೆಚ್ಚಿಸುತ್ತದೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದಿಂದ ನನಗೆ ನೀಡಿರುವ ಈ ಸನ್ಮಾನ ಸಂಗೊಳ್ಳಿ ರಾಯಣ್ಣನ ಆಶೀರ್ವಾದ ನನಗೆ ಸಿಕ್ಕಿದಂತಾಗಿದೆ ಎಂದು ಸಂಸ್ಥೆಯ ಎಲ್ಲಾಪದಾಧಿಕಾರಿಗಳಿಗೆಚಿರಋಣಿಯಾಗಿರುವುದಾಗಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಕಿನ್ನಾಳ ಗ್ರಾಮದ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಗ್ರಾಮೀಣಾಭಿವೃದ್ಧಿ ಸೇವಾಸಂಸ್ಥೆಯ ಪದಾಧಿಕಾರಿಗಳಾದ ಅಧ್ಯಕ್ಷ ಕೆ, ಎಲ್ ,ರವಿಕಿರಣ್, ಉಪಾಧ್ಯಕ್ಷ ವೀರೇಶ್ ವಾಲ್ಮೀಕಿ ,ಕಾರ್ಯದರ್ಶಿ ಗ್ಯಾನಪ್ಪ ಕೋಲ್ಕಾರ್, ಸಹ ಕಾರ್ಯದರ್ಶಿ ಸಂಕೇತ್ ಕುರುಬರು, ಖಜಾಂಚಿ ಕಾಶಿನಾಥ್ ಬಾಚಣಕೇರ್,ಸದಸ್ಯರಾದ ಯಮನೂರ್ ಡಂಬಳ್ ,ಜಗದೀಶ್ ಕಾತರಿಕಿ, ಸುಮಂತ್ ಉಪ್ಪಾರ್ ಮಂಜುನಾಥ್ ಲಾವಣಕಿ ,ಕಿರಣ್ ಸಾಗಿ ,ಶಿವರಾಜ್ ಕಾಟ್ರಳ್ಳಿ ,ತಿಪ್ಪೇಶ್ ಹೊನ್ನಉಂಚಿ ,ಬಸವರಾಜ್ ಉಪ್ಪಾರ್ ,ಅಲ್ಲಾಭಕ್ಷಿ ಕನ್ನರ್ ಮಡುವ ,ಹನುಮಪ್ಪ ಮುತ್ತಾಳ, ಅಲ್ಲದೆ ಉದ್ಯಮಿ ಮಹಬೂಬ್ ಬಾದಾಮಿ, ಕಾಂಗ್ರೆಸ್ ಮುಖಂಡ ಚಾಂದ್ ಪಾಷಾ ಕಿಲ್ಲೆದಾರ್ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಮಳೆಹಾನಿ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಭೇಟಿ ಪರಿಹಾರ ಭರವಸೆ

**ಜಮಖಂಡಿ :** ನಗರದಲ್ಲಿ ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಸರಕಾರದ ಅನುದಾನದಲ್ಲಿ ಪರಿಹಾರ ನೀಡುವುದಾಗಿ ಜಿಲ್ಲಾಧಿಕಾರಿ ಜಾನಕಿ,ಕೆ. ಭರವಸೆ ನೀಡಿದರು.

ಬುಧವಾರ ನಗರಕ್ಕೆ ಭೇಟಿ ನೀಡಿದ್ದ ಅವರು ಮಳೆಯಿಂದ ಹಾನಿಗೊಳಗಾದ ಪ್ರದೇಶಗಳ ಪರಿವೀಕ್ಷಣೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸ.23 ರಂದು ನಗರದಲ್ಲಿ 146 ಮಿಲಿ ಮೀಟರ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದೆ. ಇದರಿಂದ ತಗ್ಗುಪ್ರದೇಶಗಳಲ್ಲಿ ನೀರು ಸಂಗ್ರಹವಾಗಿದೆ ಎಂದು ಪ್ರಾಥಮಿಕ ಮಾಹಿತಿಯಿಂದ ತಿಳಿದು ಬಂದಿದೆ ಎಂದರು.

ಜಿಲ್ಲಾಮಟ್ಟದ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ವರದಿ ಸಿದ್ಧಪಡಿಸುತ್ತಿದೆ. ವರದಿ ಬಂದ ನಂತರ ಪರಿಹಾರ ನೀಡಲಾಗುವದು. ಮುಧೋಳ



ಬೈಪಾಸರ ಸ್ತೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಪಕ್ಕದ ಬೆಟ್ಟದಿಂದ ಹರಿದು ಬರುವ ನೀರು ಮುಂದಕ್ಕೆ ಹೋಗಲು ಅವಕಾಶ ಕಲ್ಪಿಸದ ಕಾರಣ ರಸ್ತೆ ಮೇಲೆ ಮತ್ತು ಐತಿಹಾಸಿಕ ಜಂಬುಕೇಶ್ವರ ದೇವಸ್ಥಾನಕ್ಕೆ ಮಳೆ ನೀರು ನುಗ್ಗುತ್ತಿದ್ದು ಕೂಡಲೇ ಸರಿಪಡಿಸಲು ಪಿಡಬ್ಲೂಡಿ ಹಾಗೂ ನಗರಸಭೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಮುಧೋಳ ಬೈಪಾಸ ರಸ್ತೆಯನ್ನು ಪ್ರವಾಸೋದ್ಯಮ ಇಲಾಖೆಯ ಅನುದಾನದಲ್ಲಿ ನಿರ್ಮಿಸಲಾಗಿದೆ. ರಸ್ತೆಯ ನಿರ್ಮಾಣದ ಸಂದರ್ಭದಲ್ಲಿ ಮಳೆ ನೀರು ಹಾಗೂ ಚರಂಡಿಯ ನೀರು ಹರಿದು ಹೋಗಲು ಯುಜಿಡಿ ಸಂಪರ್ಕ ಕಲ್ಪಿಸದೇಇರುವುದರಿಂದ ಪ್ರತಿಬಾರಿ ಮಳೆಯಾದ ಸಂದರ್ಭದಲ್ಲಿ ನೀರು ಸಂಗ್ರಹವಾಗಿ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ಜಿಲ್ಲಾಧಿಕಾರಿಗಳ ಗಮನ ಸೆಳೆದರು. ಲೋಕೊಪಯೋಗಿ ಇಲಾಖೆ ಎಇಇ ಅವರನ್ನು ಸ್ಥಳಕ್ಕೆ ಕರೆಯಿಸಿದ ಜಿಲ್ಲಾಧಿಕಾರಿಗಳು ಮಳೆಯ ನೀರು ರಸ್ತೆಯಲ್ಲಿ ಸಂಗ್ರಹವಾಗದಂತೆ ತುರ್ತಾಗಿ ಕ್ರಮ ಜರುಗಿಸಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಸೀಲ್ದಾರ ಸದಾಶಿವ ಮಕ್ಕೊಜಿ, ನಗರಸಭೆ ಅಧ್ಯಕ್ಷ ಪರಮಾನಂದ ಸಹಿತ ಹಲವರು ಇದ್ದರು.

# ಅನುದಾನಿತ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ: ಜಿಲ್ಲಾಧಿಕಾರಿ ಜಾನಕಿ ಕೆ.

**ಜಮಖಂಡಿ :** ನಗರದಲ್ಲಿ ಭರತ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಸರ್ವೋದಯ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ನಡೆಸುತ್ತಿರುವ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿ ಜಾನಕಿ.ಕೆ ಹೇಳಿದರು.

ನಗರದಲ್ಲಿ ಬುಧವಾರ ಜಲಾವೃತಗೊಂಡಿರುವ ಸ್ಥಳಗಳಿಗೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅನುದಾನದಲ್ಲಿ ನಡೆಸಲಾಗುತ್ತಿರುವ ಬಾಲಕಿಯರ ವಸತಿನಿಲಯ ಹಾಗೂ ಕಿವುಡ ಮತ್ತು ಮೂಕ ಮಕ್ಕಳ ಶಾಲೆಗಳನ್ನು ಖಾಸಗಿ ಕಟ್ಟಡಗಳ ನೆಲಮಹಡಿಯಲ್ಲಿ ನಡೆಸಲಾಗುತ್ತಿತ್ತು, ಬುಧವಾರ ಸುರಿದ ಭಾರಿ ಮಳೆಗೆ ನೆಲಮಹಡಿಗೆ ನೀರು ತುಂಬಿ ಮಕ್ಕಳು ಪರದಾಡಿದ ಘಟನೆ ವರದಿಯಾಗಿದೆ. ಮಕ್ಕಳನ್ನು ಜಾನುವಾರುಗಳಂತೆ ಒಂದೇ ಕೊಠಡಿಯಲ್ಲಿ ಕೂಡಿಹಾಕಲಾಗಿತ್ತು, ಹಣದ ಆಶೆಗೆ ಬಿದ್ದು ಮಕ್ಕಳನ್ನು ಜಾನುವಾರುಗಳಂತೆ ನಡಸಿಕೊಂಡಿರುವ ಸಂಸ್ಥೆಗಳ ವಿರುದ್ಧ



ಕ್ರಮ ಜರುಗಿಸಲಾಗುವುದು. ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಈ ಸಂಸ್ಥೆಗಳ ವಿರುದ್ಧ ನೋಟೀಸ್ ಜಾರಿ ಮಾಡಲು ಸೂಚಿನೆ ನೀಡಲಾಗಿದೆ ಎಂದರು.

ಭಾರಿ ಮಳೆಯಿಂದಾಗಿ ಉಂಟಾಗಿರುವ ಹಾನಿಯ ಕುರಿತು ಸಮಗ್ರ ಮಾಹಿತಿ ತಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸರ್ಕಾರಿ ಅನುದಾನದಲ್ಲಿ ನಡೆಯುವ ವಸತಿನಿಲಯಗಳು, ಶಾಲೆಗಳು ಮತ್ತು ಇನ್ನಿತರ ಸಂಸ್ಥೆಗಳು ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಾರ್ವಜನಿಕರಿಗೆ ಸರಿಯಾದ ಸೇವೆ ನೀಡಬೇಕು. ತಪ್ಪಿದ್ದಲ್ಲಿ ಅಂತಹ ಸಂಸ್ಥೆಗಳ ಪರವಾನಿಗೆ ರದ್ದು ಪಡೆಸಲಾಗುವದು ಎಂದರು.

ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ, ಉಪವಿಭಾಗಾಧಿಕಾರಿ ಶ್ವೇತಾಬೀಡಿಕರ, ತಹಶೀಲ್ದಾರ ಸದಾಶಿವ ಮಕ್ಕೊಜಿ, ಪಿ.ಡಬ್ಲೂ.ಡಿ. ಹಿರಿಯ ಅಭಿಯಂತರ ಗಾಡ್ಡಿವಡ್ಡರ, ನಗರಸಭೆ ಪೌರಾಯುಕ್ತರು ಸೇರಿದಂತೆ ಹಲವರು ಇದ್ದರು.

### ರೈತರಿಗೆ ಮಣ್ಣು ಪರೀಕ್ಷೆ, ಸಸ್ಯ ಪೋಷಕಾಂಶ ಕುರಿತು ಕಾರ್ಯಕ್ರಮ

# ಮಣ್ಣಿನ ಪರೀಕ್ಷೆ ನಡೆಸಿ ಬೆಳೆ ಮಾಡಿ

**ತೇರದಾಳ :** ರೈತರು ಮಣ್ಣಿನ ಪರೀಕ್ಷೆ ಮಾಡದೆ ಬೆಳೆಗಳನ್ನು ಮಾಡದೆ ತಮ್ಮ ಭೂಮಿಯಲ್ಲಿನ ಮಣ್ಣು ಪರೀಕ್ಷೆ ಮಾಡಿಸಿ ಮಣ್ಣಿನ ಗುಣಧರ್ಮಕ್ಕೆ ತಕ್ಕಂತೆ ಬೆಳೆ ಮಾಡಬೇಕೆಂದು ಶೇಖರ ಮಾನೋಜಿ ಹೇಳಿದರು.



ಇಲ್ಲಿನ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ರೈತರಿಗಾಗಿ ಹಮ್ಮಿಕೊಂಡಿದ್ದ ಮಣ್ಣು ಪರೀಕ್ಷೆ ಹಾಗೂ ಸಸ್ಯ ಪೋಷಕಾಂಶಗಳ ಕುರಿತು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾತನಾಡಿದರು.

ಭೂಮಿಯ ಫಲವತ್ತತೆ ಹೆಚ್ಚಾದಾಗ ಮಾತ್ರ ಉತ್ತಮ ಬೆಳೆ ಬರಲು ಸಾಧ್ಯ. ರೈತರಿಗೆ ಅನುಕೂಲಕರ ಆಗುವ ನಿಟ್ಟಿನಲ್ಲಿ ಡಾ. ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ ಅಡಿಯಲ್ಲಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದಾರೆಂದು ತಿಳಿಸಿದ ಅವರು, ರೈತರಿಗಾಗಿ ಸಂಸ್ಥೆ ಪ್ರಾರಂಭಿಸಿರುವ ಹಲವು ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಸಂಸ್ಥೆಯ ತಾಲೂಕು ಕೃಷಿ ಅಧಿಕಾರಿ ಚನ್ನಯ್ಯ ಹಿರೇಮಠ, ಕೃಷಿ ಅಭಿವೃದ್ಧಿ ಅನುದಾನ, ಸಿರಿಧಾನ್ಯ ಬೇಸಾಯ ಮತ್ತು ಸಂಸ್ಕರಣ ಘಟಕ, ಸುಜ್ಞಾನ ನಿಧಿ, ಜಲಮಂಗಲ ಸೇರಿದಂತೆ ಹಲವು ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಕಲ್ಲಪ್ಪ ಕಬಾಡಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬುಜಬಲಿ ಕೆಂಗಾಲಿ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷೆ ಅಶ್ವಿನಿ ದಾನಗೊಂಡ, ವಲಯ ಮೇಲ್ವಿಚಾರಕಿ ಮಹಾದೇವಿ, ಸೇವಾ ಪ್ರತಿನಿಧಿ ಪುಷ್ಪಾ ಹಜಾರೆ ಮತ್ತಿತರಿದ್ದರು.

# ಸಹಕಾರದಿಂದ ರೈತರ ಸಬಲೀಕರಣ ಸಾಧ್ಯ




**ರಬಕವಿ-ಬನಹಟ್ಟಿ :** ಸರ್ಕಾರದಷ್ಟೇ ಪ್ರಭಾವಶಾಲಿಯಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ರೈತರಿಗೆ ಸಹಕಾರಿಯಾಗಿವೆ ಎಂದು ಹೊಸೂರು ಪಿಕೆಪಿಎಸ್ನ ಅಧ್ಯಕ್ಷ ಚಿನ್ನಪ್ಪ ಅಥಣಿ ತಿಳಿಸಿದರು.

ಹೊಸೂರಿನ ಸಂಘದ ಕಾರ್ಯಾಲಯದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಿರಂತರ ರೈತರೊಂದಿಗೆ ಬೆರೆತು ಸಂಘ ಅಭಿವೃದ್ಧಿ ಹೊಂದುವ ಮೂಲಕ ಎಲ್ಲರಿಗಾಗಿ ತಾನು ತನಗಾಗಿ ಎಲ್ಲರೂ ಎಂಬ ಸಹಕಾರದ ಧ್ಯೇಯದೊಂದಿಗೆ ರೈತರ ಸಬಲೀಕರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಪ್ರಸಕ್ತ ವರ್ಷ 16.15 ಲಕ್ಷ ರೂ. ಗಳಷ್ಟು ಲಾಭ ಗಳಿಕೆಯೊಂದಿಗೆ ಸಂಘವು ಮುನ್ನಡೆಯುತ್ತಿರುವದು ವಿಶೇಷವೆಂದರು. ಮುಖ್ಯ ಕಾರ್ಯನಿರ್ವಾಹಕ ಸಂಜು ಅಥಣಿ ವಾರ್ಷಿಕ ವರದಿ ಪ್ರಸ್ತುತ ಪಡಿಸಿದರು. ಶಾಸಕ ಸಿದ್ದು ಸವದಿ, ಉಪಾಧ್ಯಕ್ಷ ಮಹಾದೇವ ಭುಜರುಕ, ಈಶ್ವರ ಸೋನಾರ, ಕೃಷ್ಣಪ್ಪ ನಾಯಕ, ಶ್ರೀಶೈಲ ಮೇಟಿ, ಯಲ್ಲಪ್ಪ ಜಕನೂರ, ಸುಭಾಸ ಚೋಳಿ, ಶಂಕ್ರೆಪ್ಪ ಭುಜರುಕ, ಮಲ್ಲಪ್ಪ ಬಿಸನಾಳ, ಮಂಜು ಲೆಂಡಿ, ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಶೈಕ್ಷಣಿಕ ಜಾಗೃತಿ ಮೂಡಿಸಿದ ಕಲಾಜಾಥಾ ಕಾರ್ಯಕ್ರಮ ಸ್ಮರಣೀಯ: ಸುತಾರ

**ಜಮಖಂಡಿ :** ಶಿಕ್ಷಕರು ಪಾಠಬೋಧನೆ ಮಾಡುವ ಜೊತೆಗೆ ಕಲೆ, ಸಾಹಿತ್ಯ, ಸಂಗೀತ ಹೀಗೆ ವಿಶಿಷ್ಟ ಹವ್ಯಾಸಗಳನ್ನು ಬೆಳೆಸಿಕೊಂಡು ಕಲಾಜಾಥಾ ಮೂಲಕ ಶೈಕ್ಷಣಿಕ ಜಾಗೃತಿ ಮೂಡಿಸಿದ್ದು ಕಲಾಜಾಥಾ ತಂಡದ ಸ್ಮರಣೀಯ ಕ್ಷಣಗಳೆಂದು ಹುಲ್ಯಾಳದ ಹಿರಿಯ ಸಾಹಿತಿ ಗುರುನಾಥ ಸುತಾರ ಹೇಳಿದರು.

ತಾಲೂಕಿನ ಸಿದ್ದಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ವಿಠ್ಠರಾಯ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅತಿಥಿಗಳಾಗಿ ಆಗಮಿಸಿ ಎಸ್. ಎಲ್. ರಾಯಣ್ಣವರ ಶಿಕ್ಷಕರು ಅಭಿನಯದ ಮೂಲಕವೂ ಕಲಾಜಾಥಾ ತಂಡದಲ್ಲಿ



ಗಮನಸೆಳೆದಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದರು.

ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ. ಜಿ. ಕಡಕೋಳ ಮಾತನಾಡಿ ಶಿಕ್ಷಕರ ಸಂಘಟನೆಯಲ್ಲಿ, ಕಲಾಜಾಥಾದಲ್ಲಿ, ಪಾಠ ಬೋಧನೆಯಲ್ಲಿ ಎಲ್ಲರ ಮೆಚ್ಚುಗೆ ಗಳಿಸಿದವರು ಎಂದರು.

ಕಲಾಜಾಥಾ ತಂಡದ ಸದಸ್ಯ, ಹನಗಂಡಿ ಗ್ರಾಮದ ನಿವೃತ್ತ ಶಿಕ್ಷಕ ಎಸ್. ಎಲ್. ರಾಯಣ್ಣವರ, ಜಿಲ್ಲಾ ಮಟ್ಟದ ಶಿಕಕಪಶಸಿಪಡೆದಗುರುಮಾತೆ ಭಾರತಿ ಮದಿನವರ ಅವರನ್ನು ತಾಲ್ಲೂಕು ಕಲಾಜಾಥಾ ತಂಡದ ವತಿಯಿಂದ ಸನ್ಮಾನಿಸಲಾಯಿತು.

ರಬಕವಿ-ಬನಹಟ್ಟಿ ತಾಲ್ಲೂಕು ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ, ಕಲಾಜಾಥಾ ತಂಡದ ಸದಸ್ಯರಾದ ಮಲ್ಲಿಕಾರ್ಜುನ ಗಡೆಣ್ಣವರ, ಪಿ. ಎಂ. ಭಜಂತ್ರಿ, ಶಾಂತಪ್ಪ ಕೆ. ಅವರು ನಾಡು ನುಡಿ ಗೀತೆಗಳು, ವಚನಗಳು, ಜಾನಪದ ಗೀತೆಗಳನ್ನು ಹಾಡಿದರು. ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಪಿ. ಎಸ್. ಕಟ್ಟಿಮನಿ ಹಾರ್ಮೋನಿಯಂ ಸಾಥ್, ಕಲಾವಿದ ಮಲ್ಲಿಕಾರ್ಜುನ ನಾವಿ ತಬಲಾ ಸಾಥ್ ನೀಡಿದರು.

ಗ್ರಾಮದ ಮುಖಂಡರಾದ ವೇ. ಮೂ. ಶ್ರೀ ಈರಯ್ಯ ಹಿರೇಮಠ ಸಾನಿಧ್ಯ ವಹಿಸಿ ನಮ್ಮ ಗ್ರಾಮದಲ್ಲಿ 10 ವರ್ಷಗಳ ಹಿಂದೆ ತಮ್ಮ ಕಲಾಜಾಥಾ ತಂಡ ಹಾಡಿದ ಹಾಡುಗಳು, ಪ್ರಹಸನಗಳು, ಕಿರುನಾಟಕಗಳು ಗ್ರಾಮಸ್ಥರ ಗಮನ ಸೆಳೆದಿವೆ ಎಂದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ವಿಠ್ಠಲ ಶಿಕರೆಪ್ಪಗೋಳ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯ ಮುಖ್ಯಗುರು, ಕಲಾತಂಡದ ನಾಯಕ ಎ. ಎಂ. ಕುಣಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಶಿಕ್ಷಕ ಎಸ್. ಎನ್. ಮಣ್ಣೂರ ನಿರೂಪಿಸಿದರು. ಐ. ಎಂ. ದೊಡ್ಡವಾಡ ವಂದಿಸಿದರು.

# ರಾಜಕಾರಣ ಇಲ್ಲಿ ಮಾಡಕೂಡದು ಎನಿದ್ದರೂ ದ್ವಾರಬಾಗಿಲ್ಲ ಹೊರಗೆ ಇದು ರೈತರ ಆಸ್ತಿ: ಶಾಸಕ ಯಶವಂತರಾಯಗೌಡ ಪಾಟೀಲ

**ಇಂಡಿ :** ಶ್ರೀಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ 16596 ಜನ ರೈತರ ಆಸ್ತಿಯಾಗಿದ್ದು ರಾಜಕಾರಣ ಈ ಸ್ಥಳದಲ್ಲಿ ಯಾರೂ ಮಾಡಬೇಡಿ ರಾಜಕಾರಣ ಎನ್ನಿದ್ದರೂ ದ್ವಾರ ಬಾಗಿಲುಹೋರಗೆನಡೆಯಲಿರಾಜಕಾರಣದಲ್ಲಿ ಯಾರಿಗಾದರೂ ನನ್ನ ಮೇಲೆ ದ್ವೇಷ ,ಅಸೋಯ ಇದ್ದರೆ ಚುನಾವಣೆ ಬಂದಾಗ ಜನರು ತೀರ್ಮಾನಿಸುತ್ತಾರೆ ಎಂದು ಶಾಸಕ ಹಾಗೂ ಶ್ರೀಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಅಧ್ಯಕ್ಷ ಯಶವಂತರಾಯಗೌಡ ಪಾಟೀಲ ಹೇಳಿದರು.

ಶ್ರೀಭೀಮಾಶಂಕರ ಸಹಕಾರಿ ಸಕ್ಕ-ರೆ ಕಾರ್ಖಾನೆ ನಿಯಮಿತ ಮರಗೂರ 6ನೇ ವರ್ಷದ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು 40 ವರ್ಷ ಸುಧೀರ್ಘ ರಾಷ್ಟ್ರೀಯ ಹೆದ್ದಾರಿಯಲ್ಲಿಬಾರಾಕಮಾನಿನಂತೆ ಕಂಗೋಳಿಸುತಿದ್ದ ಶಾಪ್ ಗ್ರಹಸ್ಥವಾದ ಈ ಕಾರ್ಖಾನೆ 2013ರಲ್ಲಿ ಶಾಸಕನಾದ ನಂತರ ಅಂದಿನ ಮುಖ್ಯ ಮಂತ್ರಿ ಸಿದ್ದರಾಮಯ್ಯನವರ ಹಾಗೂ ಅನೇಕ ಸಚಿವರ ಸಹಕಾರದಿಂದ ಪುರ್ನಜೀವನ ಕಂಡಿದೆ. ಕರ್ನಾಟಕದ ಇತಿಹಾದಲ್ಲಿಯೇ ಸಹಕಾರ ರಂಗ-ಕ್ಕೆ ಅತೀ ಹೆಚ್ಚು ಹಣಕಾಸಿನ ನೆರೆವು ನೀಡಿದ ಈ ರಾಜ್ಯ ಕಂಡ ಅಪರೂಪದ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು. ಯಾರು ಸಹಾಯ- ಸಹಕಾರ ಮಾಡಿದ್ದಾರೆ ಅವರನ್ನು ಅಭಿನಂದಿಸದಿದ್ದರೆ ಮನುಷ್ಯತ್ವ ಅನ್ನುವುದಿಲ್ಲ. ರೈತ ದೇಶದ ಬೆನ್ನಲುಬು ಇವರ ಬದುಕಿಗೆ ಆಧಾರವಾಗಿ ಈ ಕಾರ್ಖಾನೆ ಕಟ್ಟಬೇಕು ಎಂಬ ನಾಕರೇ ಹಾಗೂ ನಮ್ಮ ಅನೇಕ ಪೂರ್ವಜರ ಕನಸಾಗಿತ್ತು ಇಂದು ಸಹಕಾರಗೊಂಡು 6ನೇ ವರ್ಷಕ್ಕೆ ಪಾದಾರ್ಪಣೆಯಾಗಿ ಇಂದು ಕಾರ್ಖಾನೆ ರೈತರ ಆಸ್ತಿಯಾಗಿ ಆಕಾಶೇದತ್ತರಕ್ಕೆ ಬೆಳೆದು ನಿಂತಿದೆ.

ಶ್ರೀಭೀಮಾಶಂಕರ ಹೆಸರಿನಿಂದ ಸ್ಥಾಪಿಸಿದ ಈ ಕಾರ್ಖಾನೆಯಲ್ಲಿ ಒಂದೇ ನೈಯಾಪೈಸ್ ಲೋಪವಾಗಿದ್ದರೆ ದೇವರೆ ನೋಡಿಕೊಳ್ಳಲಿ. ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಸ್ಥಾಪಿಸಲಾಗಿದೆ ಇಲ್ಲಿಯಾವದೇ ಮೋಸ ,ವಂಚನೆ ರೈತರ ಜೀವನ ಜೊತೆ ಚೆಲ್ಲಾಟ ಆಡಿದರೆ ಭಗವಂತನೇ ನೋಡಿಕೊಳ್ಳಲಿ, ರೈತರು ಸಾಕಷ್ಟು ಸಂಕಷ್ಟದಲ್ಲಿದ್ದಾರೆ ಕಾರ್ಖಾನೆ ಸ್ಥಾಪಿಸಲಾಗಿದೆ ವಿಹನಃ ಲಾಭಕ್ಕಾಗಿ ಅಲ್ಲ. ಇಲ್ಲಿಯವರೆಗೂ ಸರಕಾರ ಕಬ್ಬಿನ ಬೆಲೆ ಘೋಷಣೆ ಮಾಡಿದಕ್ಕಿಂತ ಹೆಚ್ಚವರಿಯಾಗಿ ಕಬ್ಬಿನ ಬೆಲೆ ರೈತರಿಗೆ ನೀಡಲಾಗಿದೆ.

ಈ ಭಾಗದಲ್ಲಿ ಕಬ್ಬಿನ ಇಳುವರಿ ಸರಿಯಾಗಿ ಬರುವದಿಲ್ಲ ಮ್ಯಾಚುರೀಟಿ ಕಬ್ಬು ಕಳಿಸದೆ ಇರುವುದು ಒಂದು ಕಾರಣ ಇರಬಹುದು . ಮಹಾರಾಷ್ಟ್ರ ಕಬ್ಬಿಗೆ 13 1/2 ಹೆಚ್ಚುವರಿ ರೀಕ್ವರಿ ಬರುತ್ತದೆ. ಎಲ್ಲಿ ರೀಕ್ವರಿ ಬರುತ್ತದೆ ಅಲ್ಲಿ ಆದಾಯ ಹೆಚ್ಚು ಹೀಗಾಗಿ ಕಾರ್ಖಾನೆ ಅಭಿವೃದ್ದಿ ಹೊಂದಲು ಸಾಧ್ಯೆ.



ಸಹಕಾರಿ ಸಕ್ಕರೆ ಕಾರ್ಖಾನೆ ಕೋ-ಆಪ್‌ರೇಟೀವು ಇರುವದರಿಂದ್ದ ಇಲ್ಲಿ ಸತ್ಯ,ನ್ಯಾಯ ,ನೀತಿ ಪ್ರಮಾಣಿಕತೆ ಇರಬೇಕು ನಾನು ಪರಿಶುದ್ದವಾಗಿ ಕಾರ್ಖಾನೆ ನಡೆಸಿರುವೆ. ಈ ಭಾಗದ ಜನರು ಹೃದಯವಂತರು ಎಂದು ನಾನು ಪದೆ ಪದೆ ವ್ಯಾಖ್ಯಾನಿಸುವ ಉದ್ದೇಶ ಕಾರ್ಖಾನೆ ಚುನಾವಣೆ ನಡೆದಾಗ ಯಾರು ನ್ಯಾಯ, ನೀತಿವಂತರು ಈ ಕಾರ್ಖಾನೆ ನಡೆಸುವ ಸಾಮರ್ಥ್ಯ ಯಾರಲ್ಲಿದೆ ಎಂಬ ಜಾಣತನದಿಂದ ಮತ್ತೆ ಹಿಂದಿನ ಪ್ಯಾನಲ್‌ಗೆ ಆಯ್ಕೆ ಮಾಡಿರುವ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.ಮುಂಬರುವ ದಿನಗಳಲ್ಲಿ ಕೂಡಾ ಷೇರುದಾರರು ಒಳ್ಳೆಯವರ ಪರವಾಗಿ ಇದ್ದು ಕಾರ್ಖಾನೆ ಈ ಭಾಗದಲ್ಲಿ ಉಳಿಸಬೇಕು ಎಂದರು.

ಕಾರ್ಖಾನೆ ಲಾಭದಲ್ಲಿ ಇಲ್ಲ ರೈತರ ಕಬ್ಬಿನ ಬಿಲ್ಲು ಹಾಗೂ ಬ್ಯಾಂಕಿನ ಸಾಲ ಪ್ರತಿ ವರ್ಷ ತುಂಬಲಾಗುತ್ತಿದೆ ಇದರಿಂದ್ದ ಸಾಕಷ್ಟು ತೊಂದರೆಯಾಗುತ್ತಿದೆ.

ಸುಮಾರು 5 ಲಕ್ಷದವರೆಗೆ ಕಬ್ಬು ಕ್ರಸ್ ಮಾಡಿದರೆ ಮಾತ್ರ ಸರಿ ಸರಿದೂಗಿಸಲು ಸಾಧ್ಯ .ಶ್ರೀಭೀಮಾಶಂಕರ ಸಹಕಾರಿ ಸಕ್ಕ-ರೆ ಕಾರ್ಖಾನೆಗೆ ರೈತರು ಹೆಚ್ಚುವರಿಯಾಗಿ ಕಬ್ಬು ಕಳಿಸಿ ಈ ಕಾರ್ಖಾನೆ ನಿಮ್ಮ ಆಸ್ತಿ ಇದು ಉಳಿಸುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ ಎಂದು ರೈತರಿಗೆ ಮನವಿ ಮಾಡಿದರು.

ಬಾಕ್ಸ- ಶ್ರೀರೇವಣಸಿದ್ದೇಶ್ವರ ಯಾತ ನೀರಾವರಿ ಯೋಜನೆ ಹಿಂದಿನ ಸರಕಾರ ಚಾಲನೆ ನೀಡಿ-ದ್ದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ ಶಿವುಕುಮಾರ ಈ ಭಾಗದ ರೈತ ಬಹುದಿನಗಳ ಕನಸು ನನಸಾಗಿಸಲು ಸಮಗ್ರ ನೀರಾವರಿಗಾಗಿ 3 ಸಾವಿರ ಕೋಟಿ ಅನುಧಾನ ನೀಡಿದ್ದಾರೆ. ಬಹುತೇಕ ಪ್ರದೇಶ ನೀರಾವರಿಯಾಗಿ ರೈತರು ಕಬ್ಬು ಬೆಳೆದು ಮುಂದಿನ ದಿನಗಳಲ್ಲಿ ಅವರ ಬಾಳು ಬಂಗಾರವಾಗುತ್ತದೆ ಇಡೀ ಕರ್ನಾಟಕ ಸರಕಾರ ಈ ಭಾಗದ ರೈತರ ಶ್ರೇಯೋಭಿವೃದ್ದಿಗೆ ಶ್ರಮಿಸುತ್ತಿದೆ.

ಶಾಸಕ ಹಾಗೂ ಕಾರ್ಖಾನೆ ಅಧ್ಯಕ್ಷ ಯಶವಂತರಾಯಗೌಡ ಪಾಟೀಲ.

ಈ ಕಾರ್ಖಾನೆ ತರುವದೊಂದೆ ನಿಮ್ಮ ಕೆಲಸವಲ್ಲ ಹಾನಿಯಾಗುತ್ತಿದೆ ಎಂದು ಕೈ ಚೇಲಿ ಕುಳಿತಕೊಳ್ಳಬೇಡಿ. ಕಾರ್ಖಾನೆ ತರುವಾಗ ಚಾಲೇಂಜ್ ಮಾಡಿದಂತೆ ಉಳಿಸಲು ಚಾಲೇಂಜ್‌ನ್ನಾಗಿ ಸ್ವೀಕರಿಸಿ ನೀವು ಶಾಸಕರು ನಿಮ್ಮಂತಹ ಬುದ್ದಿವಂತರು ಹೀಗೆ ಮಾತನಾಡಿದರೆ ಹೇಗೆ ನೀವು ಯಾವ ಇಲಖೆಯಿಂದಾದರೂ ಅನುಧಾನ ತರುವ ಸಾಮರ್ಥ್ಯ ನಿಮ್ಮಲ್ಲಿದೆ ಬೇರೆಯವರಿಂದ ಕಾರ್ಖಾನೆ ಹಾಳು ಆಗುತ್ತದೆ ನೀವೇ ಕಟ್ಟಿ ನಿಮ್ಮಿಂದಲೇ ಹಾಳು ಮಾಡಬೇಡಿ ದಯಮಾಡಿ ಇದನ್ನು ಉಳಿಸುವ ಕರ್ತವ್ಯ ನಿಮ್ಮ ಮೇಲಿದೆ. ನಿಮ್ಮ ಜೊತೆ ಸದಾ ರೈತರು ,ಷೇರುದಾ ಮತಕ್ಷೇತ್ರದ ಜನರು ಇರುತ್ತಾರೆ ಎಂದು ಸಹಕಾರಿ ಶ್ರೀಮಂತ ಇಂಡಿ ಮಾತನಾಡಿದರು.

ರೈತ ಮುಖಂಡ ಗುರುನಾಥ ಬಗಲಿ ಮಾತನಾಡಿದರು.

ನಿರ್ದೇಶಕ ಎಂ.ಆರ್ ಪಾಟೀಲ ಪ್ರಾಸ್ತಾವಿಕ ಮಾತನಾಡಿದರು.

ನಿರ್ದೇಶಕರಾದ ಎಂ.ಆರ್ ಪಾಟೀಲ, ಬಿ.ಎಂ ಕೋರೆ, ಸಿದ್ದಣ್ಣಾ ಬಿರಾದಾರ, ಜೆಟ್ಟೆಪ್ಪ ರವಳಿ, ವಿಶ್ವನಾಥ ಬಿರಾದಾರ, ಸುರೇಶಗೌಡ ಪಾಟೀಲ, ಅಶೋಕ ಗಜಾಕೋಶ, ರೇವಗೊಂಡಪ್ಪಗೌಡ ಪಾಟೀಲ, ಬಸವರಾಜ ಧನಶ್ರೀ, ಲಲೀತಾ ನಡಗೇರಿ, ದುಂಡಪ್ಪ ಖೇಡ, ಸರೋಜನಿ ಪಾಟೀಲ, ಮ್ಯಾನೇಜಿಂಗ್ ಡ್ಯಾರೇಕ್ಟರ್ ಭಾಗ್ಯಶ್ರೀ.ಎಸ್.ಕೆ ,ಉಪವಿಭಾಗಾಧಿಕಾರಿ ಅಬೀದ ಗದ್ಯಾಳ ವೇದಿಕೆಯಲ್ಲಿದ್ದರು.

ಈ ಕಾರ್ಖಾನೆ ತರುವದೊಂದೆ ನಿಮ್ಮ ಕೆಲಸವಲ್ಲ ಹಾನಿಯಾಗುತ್ತಿದೆ ಎಂದು ಕೈ ಚೇಲಿ ಕುಳಿತಕೊಳ್ಳಬೇಡಿ. ಕಾರ್ಖಾನೆ ತರುವಾಗ ಚಾಲೇಂಜ್ ಮಾಡಿದಂತೆ ಉಳಿಸಲು ಚಾಲೇಂಜ್‌ನ್ನಾಗಿ ಸ್ವೀಕರಿಸಿ ನೀವು ಶಾಸಕರು ನಿಮ್ಮಂತಹ ಬುದ್ದಿವಂತರು ಹೀಗೆ ಮಾತನಾಡಿದರೆ ಹೇಗೆ ನೀವು ಯಾವ ಇಲಖೆಯಿಂದಾದರೂ ಅನುಧಾನ ತರುವ ಸಾಮರ್ಥ್ಯ ನಿಮ್ಮಲ್ಲಿದೆ ಬೇರೆಯವರಿಂದ ಕಾರ್ಖಾನೆ ಹಾಳು ಆಗುತ್ತದೆ ನೀವೇ ಕಟ್ಟಿ ನಿಮ್ಮಿಂದಲೇ ಹಾಳು ಮಾಡಬೇಡಿ ದಯಮಾಡಿ ಇದನ್ನು ಉಳಿಸುವ ಕರ್ತವ್ಯ ನಿಮ್ಮ ಮೇಲಿದೆ. ನಿಮ್ಮ ಜೊತೆ ಸದಾ ರೈತರು ,ಷೇರುದಾ ಮತಕ್ಷೇತ್ರದ ಜನರು ಇರುತ್ತಾರೆ ಎಂದು ಸಹಕಾರಿ ಶ್ರೀಮಂತ ಇಂಡಿ ಮಾತನಾಡಿದರು.

# ನಿರುದ್ಯೋಗ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ: ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್











**ಧಾರವಾಡ :** ರಾಜ್ಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರಕಾರ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ವಿವಿಧ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಹೇಳಿದರು.

ಅವರು ಇಂದು ಬೆಳಿಗ್ಗೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಗಾಂಧಿಭವನದಲ್ಲಿ ಆಯೋಜಿಸಲಾದ 74ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ವಿವಿಧ ಕೈಗಾರಿಕೆಗಳ ನಿರೀಕ್ಷೆಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ಕೌಶಲ್ಯಗಳನ್ನು ಕಲಿಸುವ ನಿಟ್ಟಿನಲ್ಲಿ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು. ಉದ್ಯೋಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬಿ.ಕಾಂ. ಪದವಿಯಲ್ಲಿ ಹೊಸ ನಾಲ್ಕು ವಿಭಾಗಗಳನ್ನು ತೆರಯಲಾಗಿದ್ದು, ಈಗಾಗಲೇ 1400 ವಿದ್ಯಾರ್ಥಿಗಳಿಗೆ ಪ್ರಶಿಕ್ಷಣಾರ್ಥಿ ಶಿಷ್ಯವೇತನ ನೀಡಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಡಿಜಿಟಲ್ ಲೈಬ್ರರಿ ಆರಂಭಿಸುವಂತೆ ತಿಳಿಸಿದರು. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ವೇಳಾಪಟ್ಟಿ ತರಲಾಗುತ್ತಿದೆ. ನಿರ್ದಿಷ್ಟ ಸಮಯಕ್ಕೆ ಪರೀಕ್ಷೆ ಹಾಗೂ ಫಲಿತಾಂಶ ಪ್ರಕಟಿಸಲಾಗುವುದು. ಯಾವುದೇ ತೊಂದ–ರೆ ಆಗದಂತೆ ಕ್ರಮ ವಹಿಸುತ್ತಿದೆಯೆಂದು ತಿಳಿಸಿದರು.

ವಿದ್ಯಾರ್ಥಿಗಳು ಆತ್ಮಸ್ಥೈರ್ಯದಿಂದ ಸವಾಲುಗಳನ್ನು ಎದುರಿಸಿ ಉನ್ನತ ಶಿಕ್ಷಣ ಪಡೆದು ಭವಿಷ್ಯ ರೂಪಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಚೇರಮನ್ ಪ್ರೊ. ಎಸ್. ಅಯ್ಯಪ್ಪನ್ ಅವರು ಮಾತನಾಡಿ, ಕಾಯಕವೇ ಕೈಲಾಸ ತತ್ವ ಪಾಲನೆಯ ಮೂಲಕ ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತವಾದುದನ್ನು ಸಾಧಿಸಬೇಕು ಎಂದು ಹೇಳಿದರು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯ ಕನಸನ್ನು ನನಸಾಗಿಸುವಂತೆ ಕರೆ ನೀಡಿದ ಅವರು ಉತ್ತಮ ಶಿಕ್ಷಣ ಮತ್ತು ಜ್ಞಾನ, ಕೌಶಲ್ಯಪೂರ್ಣತೆ, ನಾವೀನ್ಯತೆ ಮತ್ತು ಸೇವಾ ಮನೋಭಾವ ಇವು ಇಂದಿನ ನಿರ್ಣಾಯಕ ಕಾಲಘಟ್ಟದ ಅವಶ್ಯಕತೆಗಳಾಗಿವೆ ಎಂದರು. ಇಂದಿನ ದಿನಗಳಲ್ಲಿ ಸದಾ ಚರ್ಚೆಯಲ್ಲಿರುವ ಹವಾಮಾನ ಬದಲಾವಣೆ, ಪರಿಸರ ಮಾಲಿನ್ಯ, ನೈಸರ್ಗಿಕ ಸಂಪನ್ಮೂಲ ಅವನತಿ, ಹಸಿವು ಮತ್ತು ಅಪೌಷ್ಠಿಕತೆ, ಸಂಭವನೀಯ ರೋಗಗಳು, ಮೈಕ್ರೋಪ್ಲಾಸ್ಟಿಕ್ಸ್, ಜನಸಂಖ್ಯಾ ಪ್ರಮಾಣ ಬದಲಾವಣೆ, ವಲಸೆ ಇತ್ಯಾದಿಗಳು ನಮ್ಮ ಭವಿಷ್ಯದ ಸವಾಲುಗಳಾಗಿವೆ ಎಂದರು.

ಪ್ರವಾಹಗಳು ಮತ್ತು ಬರಗಾಲ, ಅಕಾಲಿಕ ಮಳೆ, ಭೂಕುಸಿತಗಳು, ತಾಪಮಾನ ಏರಿಕೆ ಹೆಚ್ಚು ಕಾಣುತ್ತಿದ್ದು, ವಿವಿಧ ಜೈವಿಕ ಮತ್ತು ಅಜೈವಿಕ ಒತ್ತಡಗಳು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಮನುಷ್ಯರನ್ನು ಭಾದಿಸುತ್ತಿದ್ದು, ಬಹು ಆಯಾಮಗಳ, ನಾವೀನ್ಯಪೂರ್ಣ ವಿಧಾನಗಳು ಮತ್ತು ಪರಿಹಾರೋಪಾಯಗಳು ಇಂದಿನ ಅನಿವಾರ್ಯ ಅಗತ್ಯತೆಯಾಗಿದೆ ಎಂದರು.

ನಮ್ಮ ಕೃಷಿ ಸಮುದಾಯಗಳ ಅನ್ನದಾತರು ತಮ್ಮ ಸಮರ್ಪಣಾ ಮನೋಭಾವ ಮತ್ತು ಕಠಿಣ ಪರಿಶ್ರಮದಿಂದ ಇಡೀ ದೇಶದ ಹಸಿವನ್ನು ನೀಗಿಸುತ್ತಾ ಬಂದಿದ್ದು, ಆಹಾರ ಭದ್ರತೆಯ ಭರವಸೆನೀಡಿರುವುದಲ್ಲದೆ,ದೇಶವನ್ನುಇನ್ನಷ್ಟು ಬಲಿಷ್ಠ ಹಾಗೂ ಪ್ರಕಾಶಮಾನವಾಗಿಸಿದ್ದಾರೆ. ನಮ್ಮ ದೇಶದ 65 ಕೋಟಿಗಿಂತ ಹೆಚ್ಚು ಜನರು ಕೃಷಿ ಅವಲಂಬಿಸಿದ್ದು, ನಮ್ಮ ವಾರ್ಷಿಕ ಆಹಾರ ಉತ್ಪಾದನೆಯ 332 ಮಿಲಿಯನ್ ಟನ್ ಆಹಾರಧಾನ್ಯಗಳು, 355 ಮಿಲಿಯನ್ ಟನ್ ಹಣ್ಣು ಮತ್ತು ತರಕಾರಿಗಳು, 231 ಲೀಟರ್ ಹಾಲು, 10 ಮಿಲಿಯನ್ ಟನ್ ಮಾಂಸ, 18 ಮಿಲಿಯನ್ ಟನ್ ಮೀನು ಹಾಗೂ 120 ಬಿಲಿಯನ್ ಮೊಟ್ಟೆ ಇತ್ಯಾದಿಗಳು ಸೇರಿ 1000 ಮಿಲಿಯನ್ ಟನ್‌ಗಳಷ್ಟು ಆಹಾರವಾಗುತ್ತದೆ. ಉದ್ದಿಮೆಯಾಗಲಿ, ಇಂಧನವಾಗಲಿ, ಸಂವಹನವಾಗಲಿ, ಅಂತರ್ಜಾಲ ಆಧಾರಿತ ಕೃತಕ ಬುದ್ದಿಮತ್ತೆ ಅಥವಾ ನಾವೀನ್ಯಪೂರ್ಣ ಬದಲಾವಣೆಗಳ ಯಾವುದೇ ವಲಯವಾಗಿರಲಿ, ಅಲ್ಲಿ ಮಾನವ ಪ್ರತಿಭೆ, ಉತ್ಸಾಹ ಮತ್ತು ಉದ್ಯಮಶೀಲತೆಯು ಪುನರುಜ್ಜೀವನ ಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ ಎಂದರು.

ಕುಲಪತಿ ಕೆ. ಬಿ. ಗುಡಸಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಸಚಿವ ಕೆ.ಚನ್ನಪ್ಪ ಅವರು ಸುವರ್ಣ ಪದಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ವಿವರವನ್ನು ನೀಡಿದರು. ಮೌಲ್ಯಮಾಪನ ಕುಲ ಸಚಿವ ನಿಜಲಿಂಗಪ್ಪ ಮಟ್ಟಿಹಾಳ ಅವರು ಪಿಎಚ್.ಡಿ.ಪದವಿ, ರ್‍ಯಾಂಕ್, ಶಿಷ್ಯವೇತನ ಮತ್ತು ನಗದು ಪಾರಿತೋಷಕ ಪ್ರಶಸ್ತಿ ಪ್ರಮಾಣವನ್ನು ಪಡೆದ ವಿದ್ಯಾರ್ಥಿಗಳ ವಿವರವನ್ನು ನೀಡಿದರು ಕಾರ್ಯಕ್ರಮದಲ್ಲಿ ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಕರ್ನಾಟಕ ವಿಶ್ವವಿದ್ಯಾಲಯದ 74 ನೆ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮರೇಗುದ್ದಿಯ ನಿರುಪಾಧೀಶ ಮಹಾಸ್ವಾಮಿ, ಡಾ. ವೆಂಕಟ ಸತ್ಯ ವರ ಪ್ರಸಾದ ಚಿಗುರುಪಾಟಿ ಹಾಗೂ ಎಸ್.ಎನ್. ವೆಂಕಟಲಕ್ಷ್ಮೀ ನರಸಿಂಹರಾಜು ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ನೀಡಲಾಯಿತು.

*ಕರ್ನಾಟಕ ವಿಶ್ವವಿದ್ಯಾಲಯದ 74 ನೆ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ವಿಭಾಗದ ವಿಧ್ಯಾರ್ಥಿಗಳು ಅತೀ ಹೆಚ್ಚು ಪದಕಗಳನ್ನು ಪಡೆದವರ ವಿದ್ಯಾರ್ಥಿಗಳ ವಿವರ:* ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿ ಜಯಶ್ರೀ ತಳವಾರ ಅವರಿಗೆ 9 ಪದಕಗಳು ಮತ್ತು ಎರಡು ನಗದು ಪ್ರಶಸ್ತಿ ಹಾಗೂ ಮಮತಾ ಜಗದೀಶ ನಾಯ್ಡು ಅವರಿಗೆ 1 ಪದಕ ಪಡೆದಿದ್ದಾರೆ. ಕನ್ನಡ ಅಧ್ಯಯನ ವಿಭಾಗದ ವಿಧ್ಯಾರ್ಥಿನಿ ಸಂಗೀತಾ ರಾ ಲಕ್ಕಪ್ಪಣ್ಣನವರ ಅವರಿಗೆ 9 ಪದಕ ಮತ್ತು ಎರಡು ನಗದು ಪ್ರಶಸ್ತಿ ಪಡೆದಿದ್ದಾರೆ. ಜೀವರಸಾಯನ ಶಾಸ್ತ್ರ ವಿಭಾಗದ ವಿಧ್ಯಾರ್ಥಿನಿ ಹರ್ಷಿತಾ ಡಿ ಅವರಿಗೆ 8 ಪದಕಗಳು ಪಡೆದು–ಕೊಂಡರು.

ಪ್ರಾಣಿಶಾತ್ರ ವಿಭಾಗದ ವಿಧ್ಯಾರ್ಥಿನಿ ವಿಸ್ಮಯ ಸಿ.ಅಂಗಡಿ ಅವರಿಗೆ 8 ಪದಕಗಳು ಮತ್ತು ಎರಡು ನಗದು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಲೈಬ್ರೆರಿ ಸೈನ್ಸ್ ವಿಭಾಗದ ವಿದ್ಯಾರ್ಥಿನಿ ರಚನಾ ಶಿವಳ್ಳಿ ಅವರಿಗೆ 8 ಪದಕಗಳು ಮತ್ತು ಒಂದು ನಗದು ಪ್ರಶಸ್ತಿಯನ್ನು ಪಡೆದಿದ್ದಾರೆ ಹಾಗೂ ವಿವಿಧ ವಿಭಾಗದ ವಿದ್ಯಾರ್ಥಿಗಳು ಚಿನ್ನದ ಪದಕ ಮತ್ತು ನಗದು ಪ್ರಶಸ್ತಿಯನ್ನು ಪಡೆದು–ಕೊಂಡಿದ್ದಾರೆ.

# ‘ಮಕ್ಕಳ ಅಧ್ಯಯನ ಭಾಷೆಯೇ ಚಿತ್ರಕಲೆ’

**ಧಾರವಾಡ :** ಪ್ರತೀ ಮಗುವೂ ವಿಭಿನ್ನ ಶೈಲಿಗಳಲ್ಲಿ ತನ್ನ ಮನದಾಳದ ಕಲ್ಪನೆಗಳಿಗೆ ಅನುಸಾರವಾಗಿ ಗೀಚುವುದರಲ್ಲಿಯೇ ಆನಂದವನ್ನು ಅನುಭವಿಸುತ್ತದೆ. ನಂತರ ಶಾಲಾ ಕಲಿಕೆಯಲ್ಲಿ ಶಿಕ್ಷಕರು ಚಿತ್ರಗಳ ಮೂಲಕವೇ ಅಕ್ಷರಾಭ್ಯಾಸ ಆರಂಭಿಸುತ್ತಾರೆ. ಹಾಗಾಗಿ ಮಕ್ಕಳ ಅಧ್ಯಯನ ಭಾಷೆಯೇ ಚಿತ್ರಕಲೆಯಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ ಹೆಚ್ಚುವರಿ ಆಯುಕ್ತೆ ಜಯಶ್ರೀ ಶಿಂತ್ರಿ ಪ್ರತಿಪಾದಿಸಿದರು.

ಅವರು ನಗರದ ಸರಕಾರಿ ಆರ್ಟ ಗ್ಯಾಲರಿಯಲ್ಲಿತಮ್ಮಕಚೇರಿಯವತಿಯಿಂದ ಹಮ್ಮಿಕೊಂಡಿರುವ ಬೆಳಗಾವಿ ವಿಭಾಗ ಮಟ್ಟದ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರ 5 ದಿನಗಳ ಕಲಾಕೃತಿ ರಚನಾ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಚಿತ್ರಕಲೆಯು ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಗೆ ಸ್ವಾಭಾವಿಕ ಸಾಧನವಾಗಿದೆ. ಮಕ್ಕಳಲ್ಲಿಸೃಜನಶೀಲತೆಮತ್ತುಭಾವನೆಗಳ ಅಭಿವ್ಯಕ್ತಿಯ ಕಲ್ಪನಾಶಕ್ತಿ ಅಧಿಕಗೊಳ್ಳಲು ಚಿತ್ರಕಲೆ ನೆರವಾಗುತ್ತದೆ ಎಂದರು.

ಈ ಹಿಂದೆ ‘ಗಾಂಧೀಜಿ–150 : ಕುಂಚ ನಮನ’ ಹಾಗೂ ‘ನಕಲು ಮುಕ್ತ ಪರೀಕ್ಷಾ ವ್ಯವಸ್ಥೆ’ ಎಂಬ ಪ್ರಧಾನ ಪರಿಕಲ್ಪನೆಗಳಲ್ಲಿ ನಮ್ಮ ಆಯುಕ್ತಾಲಯದಿಂದಲೇ ಎರಡು ಭಾರಿ ಯಶಸ್ವೀ ಶಿಬಿರಗಳನ್ನು ಸಂಘಟಿಸಲಾಗಿದೆ. ಪ್ರಸ್ತುತ 2024–25ರ ಶೈಕ್ಷಣಿಕ ಬಲವರ್ಧನೆ ವರ್ಷದ ಅಂಗವಾಗಿ ‘ನಮ್ಮ ಶಾಲೆ–ನಮ್ಮ ಜವಾಬ್ದಾರಿ’ ಎಂಬ ಪ್ರಧಾನ ಆಶಯದ ಅಡಿಯಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳ ವಿಕಾಸದ ಪರಿಕಲ್ಪನೆಗಳೊಂದಿಗೆ ವಿಜಯಪೂರ, ಬಾಗಲಕೋಟ, ಬೆಳಗಾವಿ, ಉತ್ತರಕನ್ನಡ, ಧಾರವಾಡ, ಹಾವೇರಿ, ಗದಗ, ಶಿರಸಿ ಹಾಗೂ ಚಿಕ್ಕೋಡಿ ಜಿಲ್ಲೆಗಳ 50 ಜನ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರು ವಿಶಿಷ್ಟ ಕಲಾಕೃತಿಗಳನ್ನು ಸಿದ್ಧಪಡಿಸಲಿದ್ದಾರೆ ಎಂದೂ ಜಯಶ್ರೀ ಶಿಂತ್ರಿ ಹೇಳಿದರು.

ಇಲಾಖೆಯ ಜಂಟಿ ನಿರ್ದೇಶಕ ಈಶ್ವರ ನಾಯಕ ಮಾತನಾಡಿ, ಮಕ್ಕಳ ಚಿತ್ರಗಳಲ್ಲಿ ಒಂದು ಶಕ್ತಿ ಇದೆ.

ಕಾರಣ ಮಕ್ಕಳ ಚಿತ್ರಕಲೆ ಶುದ್ಧವಾದ ಕಲೆ. ಹಾಗಾಗಿ ಮಕ್ಕಳ ಚಿತ್ರಗಳು ಅಮೂಲ್ಯವಾದವು. ಅವರು ತಮ್ಮದೇ ಆದ ಕಲ್ಪನೆಯಿಂದಲೇ ಚಿತ್ರಿಸುತ್ತಾರೆ. ಅವರ ಚಿತ್ರಗಳೆಂದರೆ ಅನುಬಂಧ ಪರಂಪರೆಯ ಅಭಿವ್ಯಕ್ತಿಯಾಗಿದೆ ಎಂದರು.



ಆಯುಕ್ತರ ಕಚೇರಿಯ ಆಡಳಿತ ಡಿಡಿಪಿಐ ಸಂಜೀವ ಬಿಂಗೇರಿ, ಸರಕಾರಿ ಚಿತ್ರಕಲಾ ಕಾಲೇಜಿನ ಪ್ರಾಚಾರ್ಯ ಡಾ. ಬಸವರಾಜ ಕುರಿಯವರ ಹಾಗೂ ‘ಜೀವನ ಶಿಕ್ಷಣ’ ಮಾಸಪತ್ರಿಕೆಯ ನಿವೃತ್ತ ಸಂಪಾದಕ ಗುರುಮೂರ್ತಿ ಯರಗಂಬಳಿಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕ ಪಿ.ಆರ್. ಬಾರಕೇರ, ಎಸ್.ಎ. ಕೇಸರಿ, ಗುರುರಾಜ ಅಂಬೇಕರ, ರವಿ ಗೋಡಕೆ, ಗೋಪಾಲ ಚಲವಾದಿ, ಇಸೂಫ್‌ಅಲಿ ಖಲಾಸಿ, ವಿಜಯಕುಮಾರ ಶಿಂಗೆ, ಹೇಮಂತ ಲಮಾಣಿ ಇದ್ದರು.

ಯೋಜನಾ ಸಹಾಯಕ ಪ್ರವೀಣ ಬಿರಾದಾರ ಸ್ವಾಗತಿಸಿದರು. ಹಿರಿಯ ಸಹಾಯಕ ನಿರ್ದೇಶಕ ಬಿ.ವೈ. ಭಜಂತ್ರಿ ವಂದಿಸಿದರು. ಚಿತ್ರಕಲಾ ಶಿಕ್ಷಕ ಡಾ. ಸಂಗಮೇಶ ಬಗಲಿ ಸ್ವತಃ ಸಿದ್ಧಪಡಿಸಿ ತಂದಿದ್ದ ಆಯುಕ್ತರ ಭಾವಚಿತ್ರವನ್ನು ಜಯಶ್ರೀ ಶಿಂತ್ರಿ ಅವರಿಗೆ ಸಲ್ಲಿಸಿದರು.

## ಕಾನೂನು ನೆರವು ಅಭಿರಕ್ಷಕರ ಕಛೇರಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಧಾರವಾಡ :** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಡಿಯಲ್ಲಿ ರಚನೆಗೊಂಡ ಕಾನೂನು ನೆರವು ಅಭಿರಕ್ಷಕರ ಕಛೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಖಾಲಿ ಇರುವ 2 ಉಪ ಕಾನೂನು ನೆರವು ಅಭಿರಕ್ಷಕರು, 4 ಸಹಾಯಕ ಕಾನೂನು ನೆರವು ಅಭಿರಕ್ಷಕರ ಹುದ್ದೆಗಳಿಗೆ ನ್ಯಾಯವಾದಿಗಳಿಂದ ಹಾಗೂ 2 ಸಹಾಯಕ ಮತ್ತು 2 ಕಛೇರಿ ಜವಾನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿ ಅಭ್ಯರ್ಥಿಗಳು ಅಕ್ಟೋಬರ್ 03, 2024ರ ಭರ್ತಿಮಾಡಿದ ಅರ್ಜಿಗಳನ್ನು ಧಾರವಾಡ ಎಡಿಆರ್ ಕಟ್ಟಡ ಸಿವಿಲ್ ನ್ಯಾಯಾಲಯಗಳ ಆವರಣದಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳ ಕಾರ್ಯಾಲಯಕ್ಕೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಜಿ. ರಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭ್ರೂಣ ಲಿಂಗ ಪತ್ತೆ ಪ್ರಕರಣ: ಜಾಮೀನು ರಹಿತ ಅಪರಾಧ–F.I.R ದಾಖಲಿಸದ ಅಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣ ದಾಖಲು: ಗಡಾದ

**ಮೂಡಲಗಿ :** ಗರ್ಭಧಾರಣಾ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆತಂತ್ರ ವಿಧಾನಗಳ & ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮಗಳನ್ನು ಉಲ್ಲಂಘಿಸಿರುವದು ಖಚಿತ ಪಟ್ಟಿದ್ದರೂ ಆಪಾಧಿತರನ್ನು ರಕ್ಷಣೆ ಮಾಡಲು ನಿಂತಿರುವ ಜಿಲ್ಲ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧೀಸಿದವರ ಮೇಲೆ ಕ್ರಮ ಕೈಗೊಳ್ಳಲು ಆರೋಗ್ಯ&ಕುಟುಂಬ ಕಲ್ಯಾಣ ಸಚಿವರಿಗೆ ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯಲಾಗಿದೆ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗುಂ ಗಡಾದ ತಿಳಿಸಿದ್ದಾರೆ,

ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಪ್ರಸವ ಪೂರ್ವ ಭ್ರೂಣಲಿಂಗಪರೀಕ್ಷೆಮಾಡುತ್ತಿದ್ದಆಸ್ಪತ್ರೆಗಳ ಮೇಲೆ ಮಾನ್ಯ ಉಪನಿರ್ದೇಶಕರು (ಪಿ.ಸಿ & ಪಿ.ಎನ್.ಡಿ.ಟಿ& ಕೆ.ಪಿ.ಎಮ್.ಇ) ಆರೋಗ್ಯ&ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು, ಹಾಗೂ ಪ್ರತ್ಯಾಯೋಜಿತ ರಾಜ್ಯ ಸಕ್ಷಮ ಪ್ರಾಧಿಕಾರಿಗಳು ಪಿ.ಸಿ & ಪಿ.ಎನ್.ಡಿ.ಟಿ ಕಾಯ್ದೆಇವರ ನೇತೃತ್ವದಲ್ಲಿ



ದಿ: 05/07/2024 ರಂದು ಮತ್ತು 15/07/2024 ರಂದು ನಡೆಸಲಾದರಹಸ್ಯ ಗುಪ್ತ ಕಾರ್ಯಾಚರಣೆಯ ಸಮಯದಲ್ಲಿ ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಮಾಡಿರುವದು ಖಚಿತವಾಗಿದ್ದರೂ ಕೂಡಾ ಅಂತಹ ವೈದ್ಯರುಗಳು ಹಾಗೂ ಸಂಬಧಿಸಿದವರ ಮೇಲೆ 45 ದಿವಸಗಳು ಕಳೆದರೂ ಸಂಬಂಧಿಸಿದ ಪೋಲಿಸ್ ಠಾಣೆಗಳಲ್ಲಿ ಪ್ರಥಮ ವರ್ತಮಾನ ವರದಿ (ಎಪ್‌ಆಯ್‌ಆರ್) ದಾಖಲಿಸದೇ ಆಪಾಧಿತ ವೈದ್ಯರ ರಕ್ಷಣೆಗೆ ಜಿಲ್ಲಾ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮುಂದಾಗಿರುವ ಈ ಪ್ರಕರಣವು ಇಡೀ ರಾಜ್ಯವೇ ತಲೆತಗ್ಗಿಸುವಂತೆ ಮಾಡಿರುವುದು ಎಂದರೆ ತಪ್ಪಾಗಲಾರದು ಅಲ್ಲದೇ ರಾಜ್ಯದಲ್ಲಿ ಆರೋಗ್ಯ ಇಲಾಖೆಗೂ ಒಬ್ಬ ಸಚಿವರು ಇರುವರೇ? ಇದ್ದರೆ ಅವರು ಕಾನೂನಿನ ಪ್ರಕಾರ ಆಡಳಿತ ನಡೆಸುತ್ತಿರುವರೇ? ಎಂಬ ಅನುಮಾನಗಳು ಕೂಡಾ ಸಾರ್ವಜನಿಕ ವಲಯದಲ್ಲಿ ಉಂಟಾಗಿರುವುದನ್ನು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ.ವಿಚಿತ್ರ ಸಂಗತಿಯೆಂದರೆ ಈ ವರದಿಯು ತಮ್ಮ ಕಾರ್ಯಾಲಯದಲ್ಲಿ ಸ್ವೀಕೃತವೇ ಆಗಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು 11/09/2024 ರಂದು ಬರೆದ ಪತ್ರದ ವಿಷಯದ ಬಗ್ಗೆಯೂ ಸರಕಾರಕ್ಕೆ ವಿವರಿಸಲಾಗಿದೆ.

ಸದರ ವೈದ್ಯರು ಹಾಗೂ ಸಿಬ್ಬರಧಿಗಳು ಕಾನೂನು ಉಲ್ಲಂಘಣೆ ಮಾಡಿರುವದು ಸ್ಪಷ್ಟವಾಗಿ ಖಚಿತವಾಗಿರುವುದರಿಂದ ಸಂಬಂಧಪಟ್ಟ ಪೋಲಿಸ್ ಠಾಣೆಯಲ್ಲಿ ಸದರ ಪ್ರಕರಣದ ಕುರಿತು ಪ್ರಥಮ ವರ್ತಮಾನ ವರದಿ (ಎಪ್‌ಆಯ್‌ಆರ್) ದಾಖಲಿಸುವಂತೆರಹಸ್ಯ ದಾಳಿಯ ತಂಡದ ಉಪ ನಿರ್ದೇಶಕರಾದಡಾ॥ ವಿವೇಕ ದೊರೈಇವರುಕಟ್ಟುನಿಟ್ಟಾಗಿ ಸೂಚನೆ ನೀಡಿದ್ದರೂ 45 ದಿವಸಗಳು ಕಳೆದರೂ ಪ್ರಥಮ ವರ್ತಮಾನ ವರದಿ (ಎಪ್‌ಆಯ್‌ಆರ್) ದಾಖಲಿಸದೇ ಇರುವದು ಹಾಗೂ ಜಿಲ್ಲಾಧಿಕಾರಿಗಳು ತಮ್ಮ ಬಳಿ ಇದರ ವರದಿ ಬಂದಿಲ್ಲವೆಂದು ಲಿಖಿತ ಹೇಳಿಕೆ ನೀಡುತ್ತಿರುವುದನ್ನು ಗಮನಿಸಿದರೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಆರೋಗ್ಯ&ಕುಟುಂಬ ಕಲ್ಯಾಣ ಅಧಿಕಾರಿಗಳು ಹಣತಿಂದು / ರಾಜಕೀಯಒತ್ತಡದಿಂದ ಈ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿರುವರೇ? ಎಂದುಸದರ ಪತ್ರದಲ್ಲಿ ಸರಕಾರದ ಗಮನ ಸೆಳೆಯಲಾಗಿದೆ. ಇಲ್ಲದೇ ಇದ್ದಲ್ಲಿ ಮಾನ್ಯಆರೋಗ್ಯ & ಕು. ಕ ಸಚಿವರು ಹಾಗೂ ಆರೋಗ್ಯಇಲಾಖೆಯ ಹಿರಿಯ ಅಧಿಕಾರಿಗಳ್ನು & ಜಿಲ್ಲಾಡಳಿತವನ್ನು ಹೊಣೆಗಾರರನ್ನಾಗಿ ಮಾಡಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವದು ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ,

# ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್ ಸಂಸ್ಥಾಪನಾ ದಿನಾಚರಣೆ



**ಬಾಗಲಕೋಟೆ :** ವಿಧ್ಯಾರ್ಥಿಗಳಲ್ಲಿ ಸಮಾಜಿಕ ಚಿಂತನೆಯ ದೇಶಭಕ್ತಿ ಬೆಳೆಯಬೇಕು ಎಂದು ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಡಾ.ಎಸ್.ಎಸ್.ಭೂಮನ್ನವರ ಹೇಳಿದರು.

ಅವರು ಬಿ.ವ್ಹಿ.ವ್ಹಿ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬಾಗಲಕೋಟ ಐ.ಕ್ಯು.ಎ.ಸಿ ಹಾಗೂ ಎನ್.ಎಸ್.ಎಸ್ ಅ ಮತ್ತು ಬ ಘಟಕಗಳ ವತಿಯಿಂದ ಇಂದು ಎನ್.ಎಸ್.ಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸ್ವಾಭಿಮಾನ, ಸ್ವಾವಲಂಬನೆ ಬದುಕು, ಶಿಸ್ತು, ಸಮಯ ಪಾಲನೆ. ಅಧ್ಯಯನ, ಮೌಲ್ಯ ಶಿಕ್ಷಣ, ಸಾಮಾಜಿಕನಿಷ್ಠೆ, ಶ್ರಮ ಸಂಸ್ಕೃತಿ ವಿದ್ಯಾರ್ಥಿಗಳ ಬದುಕಿಗೆ ಪೂರಕವಾಗಿದ್ದು, ಇದನ್ನು ಅರಿಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್. ಜೆ ಒಡೆಯರ ಮಾತನಾಡಿ ಜ್ಞಾನದರಿವು, ಸಂಬಂಧಗಳ ಮಮಕಾರ ವಿದ್ಯಾರ್ಥಿಗಳಲ್ಲಿ ಇದ್ದರೆ ಬದುಕು ಸಾರ್ಥಕವಾಗುತ್ತದೆ ಎಂದರು,

ಐಕ್ಯು ಎಸಿ ಸಂಯೋಜಕರಾದ ಶ್ರೀಮತಿ. ಪಿ.ಕೆ. ಚೌಗಲಾ ಉಪಸ್ಥಿತರಿದ್ದರು. ಕುಮಾರಿ ಸ್ಪಂದನ ಪತ್ತಾರ್ ಪ್ರಾರ್ಥಿಸಿದರು, ಡಾ. ಎಮ್.ಬಾಜಪ್ಪನವರ ಸ್ವಾಗತಿಸಿ ಪರಿಚಯಿಸಿದರು. ಎ.ಆರ್.ಬಡಿಗೇರ್ ವಂದಿಸಿದರು. ಕುಮಾರಿ ಸೌಂದರ್ಯ ಜುಜಿನ್ ನಿರೂಪಿಸಿದರು.

# ಗರಡಿ ಮನೆ ಪುನರ್ ನಿರ್ಮಾಣ: ಕುಸ್ತಿಯ ಗತ ವೈಭವ ಮರುಕಳಿಸುವಂತೆ ಕಡಾಡಿ ಕರೆ

**ಮೂಡಲಗಿ :** 70 ವರ್ಷಗಳ ಹಿಂದೆ (1955ರಲ್ಲಿ) ಸ್ಥಾಪನೆಗೊಂಡು ಶಿಥೀಲಾವಸ್ಥೆಗೆ ತಲುಪಿದ ಗರಡಿ ಮನೆಯನ್ನು ಪುನರ್ ನಿರ್ಮಾಣಗೊಳಿಸುವ ಮೂಲಕ ಕುಸ್ತಿಯ ಗತ ವೈಭವ ಮರುಕಳಿಸುವಂತೆ ಮಾಡಲಾಗಿದ್ದು, ಪಟ್ಟಣದ ಯುವಕರು ಇದರ ಸದುಯೋಗ ಪಡೆಸಿಕೊಳ್ಳಬೇಕೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕರೆ ನೀಡಿದರು.

ಗುರುವಾರ ಕಲ್ಲೋಳಿ ಪಟ್ಟಣದಲ್ಲಿ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನವೀಕರಿಸಲಾದ ಗರಡಿ ಮನೆ ಕಟ್ಟಡ ಕಾಮಗಾರಿಯನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಈರಣ್ಣ ಕಡಾಡಿ ಅವರು ಮೊದಲೆಲ್ಲ ಕುಸ್ತಿ ಆಡುವುದೆಂದರೆ ಪ್ರತಿಷ್ಠೆಯ ವಿಷಯವಾಗಿತ್ತು. ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗಿ, ಮಾನಸಿಕ ಹಾಗೂ ದೈಹಿಕವಾಗಿ ದುರ್ಬಲರಾಗುತ್ತಿದ್ದಾರೆ ಮತ್ತೆ ಅವರನ್ನು ಗರಡಿ ಮನೆಗಳತ್ತ ಸೆಳೆಯಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಜಾತ್ರೆಗಳಲ್ಲಿ ಮಾತ್ರ ನಾವು ಕುಸ್ತಿ ಆಟವನ್ನು ನೋಡುವಂತಾಗಿದೆ. ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ವೈಭವೀಕರಿಸಲು ಕುಸ್ತಿ, ಕಬಡ್ಡಿಯಂತಹ



ದೇಶಿ ಆಟಗಳನ್ನು ಪ್ರೋತ್ಸಾಹಿಸಬೇಕಾಗಿದೆ ಎಂದರು.

ಗರಡಿ ಮನೆಗಳು ಕಟ್ಟುಮಸ್ತಾದ ದೇಹಾಡ್ಯತೆಗೆ ಯೋಗ್ಯ ಸ್ಥಳಗಳಾಗಿದ್ದವು. ಇದರಿಂದಾಗಿ ಆರೋಗ್ಯ ಉತ್ತಮವಾಗಿರುತ್ತಿತ್ತು. ವಿಪರ್ಯಾಸವೆಂದರೆ ಇಂದಿನ ಮಕ್ಕಳಿಗೆ ಗರಡಿ ಮನೆಗಳ ಮಹತ್ವ ತಿಳಿದಿಲ್ಲ. ವ್ಯಾಯಾಮ ಶಾಲೆ, ಗರಡಿ ಮನೆಗಳನ್ನು ಮರು ಸ್ಥಾಪಿಸಿ ಯುವಕರನ್ನು ಪ್ರೇರಣೆಗೋಳಿಸುವ ಮೂಲಕ ಪ್ರಾಚೀನ ಭಾರತದ ಕ್ರೀಡೆಗಳಾದ ಕುಸ್ತಿ ಕಬ್ಬಡಿ ಆಟಗಳಿಗೆ ಆದ್ಯತೆ ನೀಡಲಾಗುತ್ತದೆ. ಪಟ್ಟಣದ ಯುವಜನತೆ ತಮ್ಮ ದೇಹದಾರ್ಢ್ಯ ಅಭ್ಯಾಸಕ್ಕಾಗಿ ಈ ಸುಸಜ್ಜಿತ ಗರಡಿ ಮನೆಯ ಸದುಯೋಗ ಪಡೆಸಿಕೊಳ್ಳಬೇಕೆಂದು ಕರೆ ನೀಡಿದರು.

ಪಂಚಾಯತ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಪ್ರಮುಖರಾದ ಪ್ರಭು ಕಡಾಡಿ, ಗಿರಮಲ್ಲಪ್ಪ ಸಂಸುದ್ದಿ, ಪರಪ್ಪ ಮಳವಾಡ, ಶಿವಾನಂದ ಹೆಬ್ಬಾಳ, ಶಿವಪ್ಪ ಬಿ.ಪಾಟೀಲ, ಮಲ್ಲಪ್ಪ ಖಾನಗೌಡರ, ಅಜೀತ ಚಿಕ್ಕೋಡಿ, ದಸಗೀರ ಕಮತನೂರ, ಸೋಮಲಿಂಗ ಹಡಗಿನಾಳ, ಭೀಮರಾಯ ಕಡಾಡಿ, ಗೋವಿಂದ ಕಡಾಡಿ, ಸಿದ್ದಪ್ಪ ಹೆಬ್ಬಾಳ, ಶ್ರೀಶೈಲ ಕಡಾಡಿ, ಪಟ್ಟಣದ ಪೈಲವಾನರಾದ ಲಕ್ಷ್ಮಣ ಉಮರಾಣಿ, ಹಣಮಂತ ಮೆಚ್ಚನ್ನವರ, ಸೇರಿದಂತೆ ಗರಡಿ ಮನೆ ವಿದ್ಯಾರ್ಥಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

## ಮೂಡಲಗಿ: ಮೊಟ್ಟೆ ವಿತರಣೆ




**ಮೂಡಲಗಿ :** ಪ್ರಧಾನ ಮಂತ್ರಿ ಪೋಶನ್ ಶಕ್ತಿ ನಿರ್ಮಾಣ ಕಾರ್ಯಕ್ರಮದ ಅಂಗವಾಗಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನ ಮೊಟ್ಟೆ ವಿತರಣೆ ಕಾರ್ಯಕ್ರಮವನ್ನು ಇಂದು ನಮ್ಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಖಾನಟ್ಟಿಯಲ್ಲಿ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಎಸ್ ಡಿ ಎಂ ಸಿ ಸದಸ್ಯ ಶ್ರೀಶೈಲ್ ತುಪ್ಪದ ಊರಿನ ಮುಖಂಡರಾದ ರಮೇಶ್ ಮೇತ್ರಿ, ವಿಠ್ಠಲ್ ಲಂಗೋಟಿ, ಶ್ರೀಕಾಂತ್ ಈರಪ್ಪನವರ,

ಮಹದೇವ ಬಾವಿಮನಿ ಶಾಲೆಯ ಪ್ರಧಾನ ಗುರು ಚಂದ್ರಕಾಂತ್ ಕೊಡತೆ ಹಾಗೂ ಸರ್ವ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ನರ್ಸಿಂಗ್ ಕಾಲೇಜಿನಲ್ಲಿ ವಿಶ್ವ ರೇಬಿಸ್ ದಿನಾಚರಣೆ ಕಾರ್ಯಕ್ರಮ

**ಬಾಗಲಕೋಟೆ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ,ಜಿಲ್ಲಾಆರೋಗ್ಯಮತ್ತುಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಸಮೀಕ್ಷಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ನಗರದ ಕಾಲೇಜ್ ಆಫ್ ನರ್ಸಿಂಗ್‌ನ ಸಭಾಭವನದಲ್ಲಿ ವಿಶ್ವರೇಬಿಸ್ ದಿನಾಚರಣೆ ಕಾರ್ಯಕ್ರಮ ಆಚ–ರಿಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುವರ್ಣ ಕುಲಕರ್ಣಿ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ರೇಬೀಸ್ ಮಾರಣಾಂತಿಕವಾಗಿದ್ದು ನಿರ್ಲಕ್ಷ ವಹಿಸಬಾರದು. ಮೂರು ಹೆಜ್ಜೆಗಳನ್ನು ಅನುಸರಿಸಬೇಕು. ಈ ವರ್ಷದ ಘೋಷಣೆ ರೇಬೀಸ್ ಗಡಿಗಳನ್ನು ಮೀರಿ ಮುಂದುವ–ರಿಯೋಣ ಎಂದರು.

ಜಿಲ್ಲಾ ಸಮೀಕ್ಷಾಧಿಕಾರಿ ಡಾ.ದಯಾನಂದ ಕರೆಣ್ಣವರ ಮಾತನಾಡಿ, ಫ್ರೆಂಚ್ ವೈದ್ಯ ವಿಜ್ಞಾನಿ ಲೂಯಿ ಪ್ಯಾಶ್ಚರ್ ರವರು ರೇಬೀಸ್ ಕಾಯಿಲೆಗೆ ಲಸಿಕೆ ಕಂಡು ಹಿಡಿದ್ದಾರೆ.

ಅವರು 28 ಸೆಪ್ಟಂಬರ 1895 ರಂದು ಮರಣ ಹೊಂದಿದರು. ಅವರ ಸ್ಮರಣೆಗಾಗಿ ಪ್ರತಿ ವರ್ಷ ಸೆಪ್ಟಂಬರ 28 ರಂದು ಜಗತ್ತಿನಾದ್ಯಂತ ಶಾಲೆ ಕಾಲೇಜುಗಳಲ್ಲಿ ಮತ್ತು ಸಮುದಾಯದಲ್ಲಿ ರೇಬೀಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೇ 2030ಕ್ಕೆ ರೇಬೀಸ್ ರೋಗವನ್ನು ಶೂನ್ಯಗೊಳಿಸುವುದು ಈ ದಿನದ ಉದ್ದೇಶವಾಗಿದೆ ಎಂದರು.



ಮುಖ್ಯಪಶುವೈದ್ಯಾಧಿಕಾರಿಡಾ.ವೆಂಕಟೇಶಸಂಕ್ರಿ ಮಾತನಾಡಿ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ರೇಬೀಸ್ ಲಕ್ಷಣಗಳ ಬಗ್ಗೆ ಮತ್ತು ನಿಯಂತ್ರಣ ಕ್ರಮ ಚಿಕಿತ್ಸೆ ಬಗ್ಗೆ ತಿಳಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರ(ಪರಿಸರ) ಸತೀಶ ಖಜ್ಜಿಡೋಣಿ ಮಾತನಾಡಿ ನಗರ ಪ್ರದೇಶದಲ್ಲಿ ಬೀದಿ ನಾಯಿ ಮತ್ತು ಸಾಕು ನಾಯಿಗಳ ಬಗ್ಗೆ ನಗರ ಪರಿಸರ ಸ್ವಚ್ಛತೆ ಬಗ್ಗೆ ತಿಳಿಸಿದರು.

ಜಿಲ್ಲಾ ಸೋಂಕು ಶಾಸ್ತ್ರಜ್ಞರಾದ ಡಾ.ಸೀಮಾ ಹುದ್ದಾರ ಅವರು ರೇಬೀಸ್ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಸರಸ್ವತಿ ಮಾಗಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಕಲಾ ಶಿನ್ನೂರು, ಕಾಲೇಜ್ ಆಫ್ ನರ್ಸಿಂಗ್ ಪ್ರಾಚಾರ್ಯ ಡಾ.ಉತ್ತಲಭಾಷಾ ಧಂದರಗಿ, ಡಾ.ಸುರೇಶಗೌಡ ಪಾಟೀಲ ಸೇ–ರಿದಂತೆ ಆಶಾ ಕಾರ್ಯಕರ್ತರು, ಕಾಲೇಜಿನ ಉಪನ್ಯಾಸಕರು, ಎಲ್ಲ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಹಿರಿಯ ಆರೋಗ್ಯನಿರೀಕ್ಷಣಾಧಿಕಾರಿ ಎಚ್.ಪಿ.ನಾಯ್ಕರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಸ್ವಚ್ಛತೆ ಮಾಡಿಸಿ ರಂಗೋಲಿ ಬಿಡಿಸಿದ ಪೌರ ಕಾರ್ಮಿಕರು



**ಮುಧೋಳ:** ನಗರಸಭೆ ವ್ಯಾಪ್ತಿಯಲ್ಲಿಬರುವವಾರ್ಡ್ ನಂ:25 ಬಂಡಿವಡ್ಡರ ಗಲ್ಲಿಯಲ್ಲಿ ಸ್ವಚ್ಛತಾ ಹೀ ಸೇವಾ ಅಂಗವಾಗಿ ಬ್ಲಾಕ್ ಸ್ಪಾಟ್ ಗಳನ್ನು ಗುರಿತಿಸಿ ಅಧ್ಯಕ್ಷರು ಹಾಗೂ ಸದಸ್ಯರ ಸಮ್ಮುಖದಲ್ಲಿ ಸ್ವಚ್ಛತೆ ಮಾಡಿಸಿ ರಂಗೋಲಿ ಬಿಡಿಸಿ ಸಾರ್ವಜನಿಕರಿಗೆ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದಂತೆ ಹಾಗೂ ಹಸಿ ತ್ಯಾಜ್ಯ, ಒಣ ತ್ಯಾಜ್ಯವನ್ನು ನಗರಸಭೆ ವಾಹನಗಳಿಗೆ ಪ್ರತ್ಯಕವಾಗಿ ನೀಡುವಂತೆ ಆರೋಗ್ಯ ಕಿರಿಯ ನಿರೀಕ್ಷಕರಾದ ಭೀಮು ಬಳಬಟ್ಟಿಯವರು ಸಾರ್ವಜನಿಕರಿಗೆ ಮನವಿ ಮಾಡಿಕೊಂಡರು ಈ ಸ್ಥಳದಲ್ಲಿ ಅನೇಕ ಬಾರಿ ಸ್ವಚ್ಛತೆ ಮಾಡಿ ರಂಗೋಲಿಯನ್ನು ಬಿಡಿಸಲಾಗಿದೆ ಆದರೂ ಕೂಡ ಸಾರ್ವಜನಿಕರು ಸ್ವಚ್ಛತೆಯ ಬಗ್ಗೆ ಜಾಗೃತೆಯನ್ನು ವಹಿಸುತ್ತಿಲ್ಲ ಆದ್ದರಿಂದ ದಯಮಾಡಿ ಸಾರ್ವಜನಿಕರು ಸ್ವಚ್ಛತೆ ಬಗ್ಗೆ ಗಮನಹರಿಸಿ, ತಮ್ಮ ಮನೆಯ ಸುತ್ತಮುತ್ತಲಲ್ಲಿ ಸ್ವಚ್ಛತೆಯನ್ನು ಮಾಡಿ ಮತ್ತು ಸ್ವಚ್ಛತೆಯ ಬಗ್ಗೆ ಎಲ್ಲಾ ಜನರಿಗೆ ತಿಳಿ ಹೇಳಿ ನಗರವನ್ನು ಸ್ವಚ್ಛ ನಗರವನ್ನಾಗಿ ನಾವು ನೀವುಗಳೆಲ್ಲರೂ ಸೇರಿ ಮಾಡೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಿರಿಯ ಆರೋಗ್ಯ ನಿರೀಕ್ಷಿಕರು ಬಿ ಎಸ್ ಬಳಬಟ್ಟಿ, ಎಚ್ ಟಿ ಮಲಗಿ ರಾಜು ಬೇಪಾರಿ ಸದಸ್ಯರು, ಸೂಪರ್ವೈಸರ್ ಸೈದು ದೊಡಮನಿ ಕಾರ್ಯಕ್ರಮ ನಿರ್ವಹಿಸಿದರು.

## ಕೆನರಾ ಬ್ಯಾಂಕಿನಿಂದ ಸಾಮಾಜಿಕ ಭದ್ರತಾ ಯೋಜನೆ ಅಭಿಯಾನ

**ಬಾಗಲಕೋಟೆ :** ಲೀಡ್ ಬ್ಯಾಂಕ್, ಕ್ಷೇತ್ರೀಯ ಕಾರ್ಯಾಲಯ ಕೆನರಾ ಬ್ಯಾಂಕ, ಗ್ರಾಮ ಪಂಚಾಯತಿ ಹೂಲಗೇರಿ, ಕೆನರಾ ಬ್ಯಾಂಕ ಹೂಲಗೇರಿ, ಹಾಗೂ ಯುನಿಯನ್ ಬ್ಯಾಂಕ ಆಫ್ ಇಂಡಿಯಾ ಆರ್ಥಿಕ ಸಾಕ್ಷರತೆ ಕೇಂದ್ರ ಬದಾಮಿ, ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರ ಬಾಗಲಕೋಟೆ, ಎಲ್ಲ ತಾಲೂಕಿನ ಸಿ.ಎಫ್.ಎಲ್ ಕೇಂದ್ರಗಳ ಸಹಯೋಗದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಸಾಚುರೇಶನ್ ಆಭಿಯಾನ ಹೂಲಗೇರಿ ಗ್ರಾಮದಲ್ಲಿ ಜರುಗಿತು.



ಅಭಿಯಾನವನ್ನುಉದ್ದೇಶಿಸಿ ಮಾತನಾಡಿದ ಲೀಡ ಬ್ಯಾಂಕ ಮ್ಯಾನೇಜರ್ ರಾಜ–ಕುಮಾರ ಹೂಗಾರ ಬಾರತ ಸರ್ಕಾರ ವಿಮಾ ಯೋಜನೆ ಘೋಶಿಸಿದ್ದು, ದೇಶದ ಪ್ರತಿಯೊಬ್ಬ ನಾಗಾರಿಕನಿಗೆ ಸಾಮಾಜಿ–ಕ ಭದ್ರತೆ ಒದಗಿಸಲು ಯೋಜನೆಯ ಪ್ರಯೋಜನವನ್ನು ಪ್ರತಿಯೊಬ್ಬರಿಗೂ ಸಿಗುವಂತೆ ಮಾಡುವ ಉದ್ದೇಶದಿಂದ ಜನ ಸುರಕ್ಷಾ ಅಭಿಯಾನವನ್ನು ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಹಮ್ಮಿಕೊಳಲಾಗಿದೆ. ಹೂಲಗೇರಿ ಗ್ರಾಮ ಪಂಚಾಯತಿ ಸಾರ್ವಜನಿಕರು ಮುಂದೆ ಬಂದು ಪ್ರಧಾನ ಮಂತ್ರಿ ಸುರಕ್ಷಾ ಭಿಮಾ, ಜೀವನಜ್ಯೋತಿ ಭಿಮಾ, ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕೆನರಾ ಬ್ಯಾಂಕ ಕ್ಷೇತ್ರೀಯ ಕಾರ್ಯಾಲಯದ ಕ್ಷೇತ್ರೀಯ ಪ್ರಭಂದಕಿ ಕೆ.ಆರ್.ಶೈಲಜಾ ಮಾತನಾಡಿ ಸಾಮಾಜಿಕ ಭದ್ರತಾ ಯೋಜನೆಗಳಾದ ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನಜ್ಯೋತಿ ಭಿಮಾ ಯೋಜನೆ, ಅಟಲ್ ಪಿಂಚಣಿ, ಯೋಜನೆಗಳ ಬಗ್ಗೆ ಸದುಪಯೋಗ ಪಡಿಸಿಕೊಳ್ಳಲು ಹೇಳಿದರು. ಹೂಲಗೇರಿ ಪಂಚಾಯತಿ ಅಧ್ಯಕ್ಷರಾದ ಮುಗಳೊಳ್ಳಿ ಆಭಿಯಾನಕ್ಕೆ ನಮ್ಮೆಲ್ಲರ ಸಹಕಾರ ನೀಡುವುದಾಗಿ ತಿಳಿಸಿ ಎಲ್ಲರೂ ಅಭಿಯಾನದಲ್ಲಿ ಪಲ್ಗೊಂಡು ಹೂಲಗೇರಿ ಗ್ರಾಮ ಪಂಚಾಯತಿ ಮಾದರಿಯಾಗುಂತೆ ಮಾಡಲಾಗುವುದೆಂದರು.

ಎಫ್.ಎಲ್.ಸಿ ಕೇಂದ್ರದ ಎಸ್.ಎಮ್.ಬೂದಿಹಾಳ, ಚನ್ನಬಸವರಾಜ ಬಿರಾದಾರ ಸಮಾಲೋಚಕರುಗಳು ಮತ್ತು ಎಲ್ಲ ತಾಲೂಕಿನ ಸಿ.ಎಫ್,–ಎಲ್ ಸಮಾಲೋಚಕರುಗಳು ಮತ್ತು ಹೂಲಗೇರಿ ಗ್ರಾಮ ಪಂಚಾಯತಿ ಎಲ್ಲ ಇಲಾಖೆಯ ಅಂಗನವಾಡಿ, ಆಶ ಕರ್ಯಕರ್ತರು, ಸ್ವ ಸಹಾಯ ಸಂಘದ ಪ್ರತಿನಿಧಿಗಳು ಭಾಗವಹಿದ್ದರು. ಕೆನರಾ ಬ್ಯಾಂಕ ಶಾಖಾಧಿಕಾರಿ ವಿಠ್ಠಲ ನಾಟೇಕರ ಕಾರ್ಯಕ್ರಮ ನಿರೂಪಿಸಿ ಕೊನೆಗೆ ವಂದಿಸಿದರು.

## ಪಾಲಕರ ಪತ್ತೆಗೆ ನೆರವು

**ಬಾಗಲಕೋಟೆ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ನಡೆಯುತ್ತಿರುವ ಅಮೂಲ್ಯ ಸರ್ಚ ಸ್ವದೇಶಿದತ್ತುಸ್ವೀಕಾರಕೇಂದ್ರಕ್ಕೆಪರಿತ್ಯೆಕ್ತ ಹೆಣ್ಣು ಮಗುವನ್ನು ನೀಡಲಾಗಿದೆ. ಈ ಮಗು ಬಾದಾಮಿ ತಾಲೂಕಿನ ಯರಗೊಪ್ಪ ಎಸ್.ಬಿ.ಗ್ರಾಮದಲ್ಲಿ ಸೆಪ್ಟೆಂಬರ 14 ರಂದು ದೊರೆತಿದ್ದು, ಮಗು 2 ದಿನದ್ದಾಗಿದೆ. ಗೋದಿ ಬಣ್ಣ, 1.6 ಕೆಜಿ ತೂಕಹೊಂದಿರುತ್ತದೆ. ಈ ಕುರಿತು ಬಾದಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಗುವಿಗೆ ಸಂಬಂಧಿಸಿದವರು ಪತ್ರಿಕೆಯಲ್ಲಿ ಪ್ರಕಟವಾದ 60 ದಿನಗಳಲ್ಲಿಜಿಲ್ಲಾಮಕ್ಕಳರಕ್ಷಣಾಧಿಕಾ–ರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸ್ತ್ರೀಶಕ್ತಿ ಭವನ, ಸೆಕ್ಟರ ನಂ.4, ನವನಗರ, ಬಾಗಲಕೋಟೆ ದೂಸಂ. 08354–295345 ಇವರನ್ನು ಭೇಟಿ ನೀಡಬೇಕು. ಇಲ್ಲದಿದ್ದಲ್ಲಿ ಮಗುವನ್ನು ಕಾನೂನು ಪ್ರಕಾರ ದತ್ತು ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವೀಣಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗರ್ಭಿಣಿಯರಿಗೆ ಸೀಮಂತ, ಅನ್ನ ಪ್ರಾಶ್ಯಾನ ಕಾರ್ಯಕ್ರಮ: ಆಹಾರ ಪದ್ಧತಿ ಬಗ್ಗೆ ನಿರ್ಲಕ್ಷ್ಯ ಬೇಡ

**ತೇರದಾಳ :** ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಸೇರಿದಂತೆ ಪ್ರತಿಯೊಬ್ಬರು ಸೇವಿಸುವ ಆಹಾರದ ಬಗ್ಗೆ ಯಾರು ನಿರ್ಲಕ್ಷ್ಯ ವಹಿಸಬೇಡಿ ಎಂದು ರಬಕವಿ–ಬನಹಟ್ಟಿ ತಾಲೂಕಿನ ಮಹಿಳಾ ಮತ್ತು ಮಕ್ಕಳ ಕುಟುಂಬ ಕಲ್ಯಾಣ ಇಲಾಖೆ ಹಿರಿಯ ಮೇಲ್ವಿಚಾರಕಿ ಎಸ್.ಎಸ್. ಚನ್ನಿ ಹೇಳಿದರು.

ತಮದಡ್ಡಿ ನಾಕಾ ಬಳಿಯ ಅಂಗನವಾಡಿ ಸಂಖ್ಯೆ 16 ರಲ್ಲಿ ಹಮ್ಮಿಕೊಂಡಿದ್ದ ಗರ್ಭಿಣಿಯರಿಗೆ ಸೀಮಂತ, ಅನ್ನ ಪ್ರಾಶ್ಯಾನ ಹಾಗೂ ಮಕ್ಕಳಿಗೆ ಶಿಕ್ಷಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಗರ್ಭಿಣಿಯರು ಎಷ್ಟು ಪೌಷ್ಠಿಕ ಆಹಾರ ಸ್ವೀಕರಿಸುತ್ತಾರೆ ಅಷ್ಟು ಚನ್ನಾಗಿ ಮಗುವಿನ ಬೆಳವಣಿಗೆ ಆಗುತ್ತದೆ. ಆದ್ದರಿಂದ ವೈದ್ಯರು ನೀಡುವ ಸಲಹೆಗಳನ್ನು ಸರಿಯಾಗಿ ಪಾಲಿಸುವುದರ ಜತೆಗೆ ಪೌಷ್ಠಿಕ ಆಹಾರ ಸೇವಿಸಬೇಕೆಂದು ಹೇಳಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಆಕಾಶ ಜಾಧವ ಗರ್ಭಿಣಿಯರು ಹಾಗೂ ಬಾಣಂತಿಯರು ಪಾಲಿಸಬೇಕಾದ ಅಂಶಗಳ ಕುರಿತು ಮತ್ತು ಬಿಎಚ್‌ಒ ವಸ್ತ್ರದ ಮಕ್ಕಳ ಶಿಕ್ಷಣದ ಕುರಿತು ಮಾಹಿತಿ ನೀಡಿದರು. ಕೆ.ಡಿ. ಮಾಲಗಾಂವಿ, ತೇರದಾಳ ವಲಯ ಮೇಲ್ವಿಚಾರಕಿ ಕೆ.ಎಂ. ಕುರ್ಣಿ ಹಾಗೂ ಎಲ್ಲ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು, ಗರ್ಭಿಣಿಯರು, ಮಕ್ಕಳು ಪಾಲ್ಗೊಂಡಿದ್ದರು.

## ಕಿವುಡರ 14ನೇ ರಾಜ್ಯಮಟ್ಟದ ಕ್ರೀಡಾಕೂಟ: ಮೌನ ಕ್ರೀಡಾಕೂಟದ ಕಲರವ

### ವಿಶೇಷ ಚೇತನರು ಕ್ರೀಡೆಯಲ್ಲಿ ಗೆಲ್ಲುವುದರ ಮೂಲಕ ಜೀವನ ಗೆಲ್ಲಬೇಕಾಗಿದೆ: ಡಾ.ವೀರಣ್ಣ ಚರಂತಿಮಠ

**ಬಾಗಲಕೋಟೆ :** ವಿಶೇಷಚೇತನರು ಅಗಾದ ಶಕ್ತಿಯುಳ್ಳವರು, ಅವರು ಕ್ರಿಡಾಕೂಟದಲ್ಲಿ ಗೆಲ್ಲುವುದರ ಜೊತಗೆ ಜಿವನವನ್ನು ಗೆಲ್ಲಬೇಕಾಗಿದೆ, ನಿಮ್ಮ ಜೀವನ ಪಯಣದಲ್ಲಿ ಯಶಸ್ಸು ಸಿಗಲಿ ಎಂದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಬಿ.ವಿ.ವಿ.ಸಂಘ ಆಟದ ಮೈದಾನದಲ್ಲಿ ಕರ್ನಾಟಕ ಕಿವುಡರ ಕ್ರೀಡಾ ಒಕ್ಕೂಟ ಬೆಂಗಳೂರು ಹಾಗೂ ಬಾಗಲಕೋಟೆ ಜಿಲ್ಲಾ ಕಿವುಡರ ಸಂಘದ ಸಹಯೋಗದಲ್ಲಿ ಶುಕ್ರವಾರ ನಡೆದ ಕಿವುಡರ ರಾಜ್ಯಮಟ್ಟದ 14ನೇ ಕ್ರೀಡಾಕೂಟಕ್ಕೆ ಕ್ರೀಡಾಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ವಿಶೇಷ ಚೇತನರಲ್ಲಿ ಅಗಾದವಾದ ಶಕ್ತಿ ಇದ್ದು, ಅವರಲ್ಲಿರುವ ಕ್ರೀಡಾಪ್ರತಿಭೆಗೆ ಅನಾವರಣಕ್ಕೆ ಈ ಕ್ರೀಡಾಕೂಟ ಸಹಕಾರಿಯಾಗಲಿದ್ದು, ರಾಜ್ಯಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ರಾಷ್ಟ್ರೀಯಮಟ್ಟದಲ್ಲಿಯೂ ಸಾಧನೆ ಮುಂದುವರೆಯಲಿ, ದೇಶದಲ್ಲಿ ಪ್ರಧಾನಿ ನರೇಂದ್ರಮೋದಿ ಬಂದ ನಂತರ ಕ್ರೀಡಾಕ್ಷೇತ್ರಕ್ಕೆ ಅಪಾರವಾದ ಯೋಜನೆಗಳ ಮೂಲಕ ಶಕ್ತಿ ತುಂಬಿದ್ದರಿಂದ, ಇಂದು ಭಾರತದ ಕ್ರೀಡಾಪಟುಗಳು ಜಗತ್ತಿನಾದ್ಯಂತ ದಾಖಲೆಯ ಸಾಧನೆ ಮಾಡುತ್ತಿದ್ದಾರೆ. ವಿಶೇಷ ಚೇತನರು ಕ್ರೀಡೆಯಲ್ಲಿ ಕ್ರೀಡಾಕೂಟದಲ್ಲಿ ಗೆಲ್ಲೂವುದರ ಮೂಲಕ ತಮ್ಮ ಬದುಕಿನ ಜೀವನವನ್ನು ಗೆಲ್ಲಲ್ಲಿ ಆ ಭಗವಂತ ಅವರಿಗೆ ಶಕ್ತಿ ತುಂಬಲಿ ಎಂದರು.




ಮುಖ್ಯ ಅತಿಥಿಳಾಗಿ ಆಗಮಿಸಿ ಕ್ರೀಡಾಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಬಾಗಲಕೋಟೆ ಇನ್ನರ ವ್ಹಿಲ್ ಕ್ಲಬ್ ನ ಅಧ್ಯಕ್ಷೆ ಶ್ರೀಲತಾ ಹೆಂಜಲ್ ಮಾತನಾಡಿ ಜ್ಞಾನ ಹಾಗೂ ಮಾನಸಿಕ ಬೆಳವಣಿಗೆ ಜೋತೆಗೆ ಶಾರಿರಿಕ ಬೇಳವಣಿಗೆ ಮುಖ್ಯವಾಗಿದೆ ಎಂದರು.

ನವದೆಹಲಿ ಅಖಿಲ ಭಾರತ ಕಿವುಡರ ಕ್ರೀಡಾ ಒಕ್ಕೂಟದ ಅಧ್ಯಕ್ಷರಾದ ವಿ.ಕುಮಾರ ಸನ್ನೆಮೂಲಕ ಮಾತನಾಡಿ ನವೆಂಬರ ಅಥವಾ ಡಿಸೆಂಬರ ನಲ್ಲಿ ನಡೆಯುವ ಒಲಂಪಿಕ ಕ್ರೀಡಾಕೂಟ್ ದಲ್ಲಿ ಭಾರತದ ಕ್ರೀಡಾಪಟುಗಳು ಹೆಚ್ಚನ ಸಂಖ್ಯೆಯಲ್ಲಿ ಭಾಗವಹಿಸಿರಿ ಎಂದರು.

ಪ್ರಸ್ತಾವಿಕವಾಗಿ ಮಾತನಾಡಿದ ಸಂಘದ ಕಾರ್ಯದರ್ಶಿ ರಾಘವೇಂದ್ರ ಜಾದವ ಮಾತನಾಡಿ 14ನೇ ಕ್ರೀಡಾಕೂಟದ ಬಗ್ಗೆ ಮಾಹಿತಿ ನೀಡಿದರು. ವೇದಿಕೆ ಮೇಲೆ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಜಿ.ಎಸ್.ಪಾಟೀಲ, ಕ್ರೀಡಾ ಇಕ್ಕೂಟದ ರಾಜ್ಯ ಕಾರ್ಯದರ್ಶಿ ಜಿ.ಎಸ್.ನವೀನಕುಮಾರ. ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಸುನೀಲ ಕಂದಕೂರ ಇದ್ದರು.

ಕಾರ್ಯಕ್ರಮಕ್ಕೂ ಮುಂಚೆ ಬೇರೆ ಬೇರೆ ರಾಜ್ಯದಿಂದ ಬಂದಂತ ಕ್ರೀಡಾಪಟುಗಳಿಂದ ಪಥಸಂಚಲನ, ಕ್ರೀಡಾಧ್ವಜಾರೋಹ, ಕ್ರೀಡಾ ಪ್ರತಜ್ಞಾವಿಧಿಗಳು ಜರುಗಿದವು. 25 ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚೂ ಕ್ರೀಡಾಪಟುಗಳು ಕ್ರೀಡಾಕುಟದಲ್ಲಿ ಭಾಗವಹಿಸಿದ್ದಾರೆ, ಇಂದು ಓಟ. ಉದ್ದುಜೀಗಿತ, ಎತ್ತರ ಜೀಗಿತ, ಚಕ್ರಎಸೆತ, ಮಹಿಳೆಯರ ಹಾಗೂ 600ಮೀ. ಹಾಗೂ 1600 ಮೀ ಓಟ, ಸೇರಿಂದತೆ ಅನೇಕ ಕ್ರೀಡೆಗಳು ಜರುಗಿದವು.

ಗಮನಸೇಳೆದ ಸನ್ನೆ ಭಾಷೆ : ಮನದ ಮಾತು, ಸನ್ನೆ ಮಾತು,ದೃಷ್ಟಿ ಮಾತು ನೋಡುಗರನ್ನು ಮುಗ್ದರನ್ನಾಗಿಸಿದ್ದು ಸುಳ್ಳಲ್ಲ, ಕಿವುಡ ಮತ್ತು ಮೂಗ ವಿಶೇಷ ಚೇತನರು ಸಮಯಕ್ಕನುಗುಣವಾಗಿ ಕ್ರೀಡಾಕೂಟದಲ್ಲಿ ಭಾಗಿಯಾಗಿ, ಪ್ರತಿ ಕ್ರೀಡಾಪಟುಗಳಿಗೆ ಸನ್ನೆ ಭಾಷೆಯ ಮೂಲಕ ಒಬ್ಬರನ್ನೊಬ್ಬರು ಪ್ರೋತ್ಸಹಿಸುವ ಪ್ರೇರೆಪಿಸುವ ಸನ್ನಿವೇಶಗಳು ಮನ ಮುಟ್ಟಯವಂತಿದ್ದವು, ಮನದ ಮಾತುಗಳು, ಕಣ್ಣಿನ ನೋಟಗಳು, ಕೈ ಸನ್ನೆ ಬಾಯಿ ಸನ್ನೆ ಕಣ್ಣ ಸನ್ನೆ ಎಲ್ಲವೂ ಶಾಂತವಾದರೂ ಕ್ರೀಡಾಪಟುಗಳು ಆನಂದ ತುಂಬಿ ಹರಿದಿತ್ತು.

## ಸ್ವಚ್ಛ ಭಾರತ ಅಭಿಯಾನ ಹಾಗೂ ಗಾಂಧಿ ಜಯಂತಿಯ ಹಿನ್ನೆಲೆ ಸ್ವಚ್ಛಗೊಳಿಸಿ ಶ್ರಮದಾನ





**ಕೃಷ್ಣರಾಜಪೇಟೆ :** ಸ್ವಚ್ಛ ಭಾರತ ಅಭಿಯಾನ ಹಾಗೂ ಗಾಂಧಿ ಜಯಂತಿಯ ಹಿನ್ನೆಲೆಯಲ್ಲಿ ಕೃಷ್ಣರಾಜಪೇಟೆ ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ನ್ಯಾಯಾಧೀಶರು ಹಾಗೂ ವಕೀಲರು ಕೈಯ್ಯಲ್ಲಿ ಪೊರಕೆಗಳು ಹಾಗೂ ಕುಡುಗೋಲು ಹಿಡಿದು ಕಸ ಗುಡಿಸಿ, ಗಿಡಗೆಂಟೆಗಳನ್ನು ಕತ್ತರಿಸಿ ಸ್ವಚ್ಛಗೊಳಿಸಿ ಶ್ರಮಧಾನ ಮಾಡುವ ಮೂಲಕ ನ್ಯಾಯಾಲಯದ ಆವರಣವನ್ನು ಸ್ವಚ್ಛಗೊಳಿಸಿದರು.

ಕೈಯಲ್ಲಿ ಪೊರಕೆಗಳು ಹಾಗೂ ಕುಡುಗೋಲುಗಳನ್ನು ಹಿಡಿದು ಗಿಡಗಂಟೆಗಳನ್ನು ಕತ್ತರಿಸಿ ಸ್ವಚ್ಛಗೊಳಿಸಿ, ನ್ಯಾಯಾಲಯದ ಆವರಣದಲ್ಲಿ ಬಿದ್ದಿದ್ದ ಕಸವನ್ನು ಗುಡಿಸಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದ ಹಿರಿಯ ಶ್ರೇಣಿ ನ್ಯಾಯಾಧೀಶ ಸುಧೀರ್ ಮತ್ತು ಅಪರ ಸಿವಿಲ್ ನ್ಯಾಯಾಧೀಶರಾದ ದೇವರಾಜು, ಶಕುಂತಲಾ ಮತ್ತು ಅರ್ಪಿತ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಆದ್ದರಿಂದ ನಾವು ವಾಸ ಮಾಡುವ ಪ್ರದೇಶ ಸೇರಿದಂತೆ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಂಡು ರೋಗರುಜಿನಗಳು ಬರದಂತೆ ಎಚ್ಚರ ವಹಿಸಬೇಕು ಎಂದು ಮನವಿ ಮಾಡಿದ ಸುಧೀರ್ ಗಿಡಮರಗಳನ್ನು ನೆಟ್ಟು ಮಕ್ಕಳಂತೆ ಪೋಷಿಸುವ ಮೂಲಕ ಪರಿಸರ ಜಾಗೃತಿ ಮೆರೆಯಬೇಕು ಮನೆಗೆರಡು ಮರ ಊರಿಗೊಂದು ತೋಪು ಎಂಬ ಹಿರಿಯರ ನಾಣ್ಣುಡಿಯನ್ನು ನನಸು ಮಾಡಿ ಸಾಕಾರಗೊಳಿಸುವ ದಿಕ್ಕಿನಲ್ಲಿ ಎಲ್ಲರೂ ಕೈಜೋಡಿಸಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ರವಿಶಂಕರ್, ಪ್ರಧಾನ ಕಾರ್ಯದರ್ಶಿ ರಾಜೇಗೌಡ ಹಾಗೂ ಪುರಸಭೆ ಮುಖ್ಯ ಅಧಿಕಾರಿ ರಾಜು ಕೆ.ವಠಾರ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ವಲಯ ಅರಣ್ಯಾಧಿಕಾರಿ ಅನಿತಾ ಪ್ರವೀಣ್, ಹಿರಿಯ ಆರೋಗ್ಯ ಪರಿವೀಕ್ಷಕ ಅಶೋಕ್, ಪರಿಸರ ಇಂಜಿನಿಯರ್ ಅರ್ಚನಾ ಆರಾಧ್ಯ, ನ್ಯಾಯಾಲಯದ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರು ಸ್ವಚ್ಛತಾ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ನ್ಯಾಯಾಲಯದ ಆವರಣವನ್ನು ಸ್ವಚ್ಛಗೊಳಿಸಿ ಗಿಡಮರಗಳನ್ನು ನೆಟ್ಟು ಸಂಭ್ರಮಿಸಿದರು.

**ವರದಿ.ಎಸ್ ರವಿ ಹೊನ್ನೇನಹಳ್ಳಿ**

## ಶೀಘ್ರದಲ್ಲೆ ಏಪಿಎಂಸಿಗಳ ಡಿಜಟಲೀಕರಣ ಕಾರ್ಯ ಪೂರ್ಣ: ಸಚಿವ ಶಿವಾನಂದ ಪಾಟೀಲ

### ಎಫ್‌ಕೆಸಿಸಿಐನ 107 ನೇ ಸರ್ವಸದಸ್ಯರ ಸಭೆಯಲ್ಲಿ ಭಾಗಿ | ರಾಜ್ಯದ ಅಭಿವೃದ್ದಿಗೆ ಎಫ್‌ಕೆಸಿಸಿಐ ನೀಡಿರುವ ಕೊಡುಗೆ ಬಗ್ಗೆ ಶ್ಲಾಘನೆ

**ಬೆಂಗಳೂರು :** ರಾಜ್ಯದಲ್ಲಿರುವ ಏಪಿಎಂಸಿಗಳ ಡಿಜಟಲೀಕರಣ ಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಕಾರ್ಯ ಪ್ರಾರಂಭಿಸಲಾಗಿದ್ದು, ಶೀಘ್ರದಲ್ಲೇ ಇದನ್ನು ಪೂರ್ಣಗೊಳಿಸಲಾಗುವುದು ಎಂದು ಕೃಷಿ ಮಾರುಕಟ್ಟೆ, ಜವಳಿ ಮತ್ತು ಸಕ್ಕರೆ ಇಲಾಖೆ ಸಚಿವರಾದ ಶಿವಾನಂದ ಪಾಟೀಲ್ ಅವರು ತಿಳಿಸಿದರು.

ಇಂದು ಎಫ್‌ಕೆಸಿಸಿಐ ನ 107 ನೇ ಸರ್ವಸದಸ್ಯರ ಸಭೆಯಲ್ಲಿ ಭಾಗಿಯಾಗಿ ಅವರು ಮಾತನಾಡಿದರು. ಐದು ಸಾವಿರ ಸದಸ್ಯರನ್ನು ಹೊಂದಿರುವ ಕೈಗಾ–ರಿಕಾ ಸಂಸ್ಥೆ ರಾಜ್ಯದ ಆರ್ಥಿಕ ಅಭಿವೃದ್ದಿಗೆ ತನ್ನದೇ ಆದ ವಿಶೇಷ ಕೊಡುಗೆಯನ್ನು ನೀಡಿದೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ರೀತಿಯಲ್ಲೇ ರಾಜ್ಯದ ಕೃಷಿ ಮಾರುಕಟ್ಟೆಯನ್ನು ಪುನರುಜ್ಜೀವನಗೊಳಿಸು ಅಗತ್ಯ ಕಾನೂನು ಕೂಡಾ ಜಾರಿಗೆ ತಂದಿದ್ದೇವೆ. ಈ ವಿಷಯದಲ್ಲಿ ಎಫ್‌ಕೆಸಿಸಿಐ ಬಹಳಷ್ಟು ಸಲಹೆ ಹಾಗೂಸೂಚನೆಗಳನ್ನುನೀಡಿದ್ದನ್ನ ಇಲ್ಲಿ ಹೃದಯಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ಬಗ್ಗೆ ಸಭೆಗಳನ್ನು ನಡೆಸುವ ಮೂಲಕ ಅಗತ್ಯ ಸಲಹೆಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಮಾರುಕಟ್ಟೆಯಡಿಜಟಲೀಕರಣದ ಬೇಡಿಕೆ ಪ್ರಮುಖವಾಗಿದೆ.




ಈಗಾಗಲೇ ಈ ಕಾರ್ಯವನ್ನು ಪ್ರಾರಂಭಿಸಲಾಗಿದ್ದು, ಈ ವ್ಯವಸ್ಥೆಯಲ್ಲಿ ಹಲವಾರು ಪಾಲುದಾರರು ಇದ್ದಾರೆ. ಯಾರಿಗೂ ಸಮಸ್ಯೆ ಆಗದೇ ಇರುವ ರೀತಿಯಲ್ಲಿ ಹೊಸ ವ್ಯವಸ್ಥೆಯನ್ನು ಅಳವಡಿಸುವ ಕಾರ್ಯ ಮಾಡಬೇಕಾಗಿದ್ದು, ಆ ನಿಟ್ಟಿನಲ್ಲಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ವಿಧಾನಸಭಾಧ್ಯಕ್ಷರಾದ ಯುಟಿ ಖಾದರ್ ಅವರು ಮಾತನಾಡಿ, ಬೆಂಗಳೂರು ನಗರ ವಿಶ್ವದಲ್ಲೇ ವಿಶೇಷ ಸ್ಥಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಕೊಡುಗೆ ಅಪಾರವಾಗಿದೆ. ಯಾವುದೇ ನಗರ ತಾನೇ ತಾನಾಗಿ ಅಭಿವೃದ್ಧಿ ಆಗಲು ಸಾಧ್ಯವಿಲ್ಲ. ಆರ್ಥಿಕ ಚಟುವಟಿ–ಕೆಗಳು ನಡೆಯುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಎಫ್‌ಕೆಸಿಸಿಐ ಸಂಸ್ಥೆಯ ಸದಸ್ಯರು ರಾಜ್ಯದಲ್ಲಿ ಉತ್ತಮ ಆರ್ಥಿಕ ಚಟುವಟಿ–ಕೆಗಳು ನಡೆಯುವ ವಾತಾವರಣ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗಲು ಉತ್ತಮ ವಾತಾವರಣ ನಿರ್ಮಾಣ ಮಾಡುವಲ್ಲಿ ನಿಮ್ಮ ಪಾತ್ರ ಹಿರಿದಾಗಿದೆ. ಭವಿಷ್ಯದ ಜನಾಂಗವನ್ನು ಗಮನದಲ್ಲಿಟ್ಟುಕೊಂಡುಅವರನ್ನು ಮುಂದಿನ ಸವಾಲುಗಳಿಗೆ ಸಜ್ಜು ಮಾಡುವ ಕಾರ್ಯದಲ್ಲಿ ನಿವೆಲ್ಲರೂ ತೊಡಗಿಕೊಳ್ಳಬೇಕು ಎಂದು ಇದೇ ಸಂಧರ್ಭದಲ್ಲಿ ಕರೆ ನೀಡಿದರು.

ಎಫ್‌ಕೆಸಿಸಿಐಅಧ್ಯಕ್ಷರಾದರಮೇಶ್ ಚಂದ್ರ ಲಹೋಟಿ ಮಾತನಾಡಿ, ಕಳೆದ ಒಂದು ವರ್ಷದಲ್ಲಿ ಎಫ್‌ಕೆಸಿಸಿಐ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದಕ್ಕೆ ರಾಜ್ಯ ಸರಕಾರದಿಂದ ಹಾಗೂ ಸದಸ್ಯರುಗಳಿಂದ ಉತ್ತಮ ಸಹಕಾರ ದೊರೆತಿದೆ. ಎಪಿಎಂಸಿ ಡಿಜಟಲೀಕರಣದಿಂದ ನಮ್ಮ ಕೈಗಾರಿಕಾ ಸಮುದಾಯಕ್ಕೆ ಬಹಳಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ನಿಯೋಜಿತ ಅಧ್ಯಕ್ಷರಾದ ಎಂ.ಜಿ ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷರಾದ ಉಮಾ ರೆಡ್ಡಿ ಸೇರಿದಂತೆ ಹಲವರು ಉಪಸ್ಥಿತ–ರಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State